UASB LIBRARY
Newspaper Clippings
Pg .1 Sturday13-11-2021 Jai Kisan



ಜಿಟಿ ಜಿಟಿ ಮಳೆ ನಡುವೆಯೂ ವಿವಿಧ ಜಿಲ್ಲೆಯಿಂದ ಆಗಮಿಸಿರುವ ರೈತರು

6 ಲಕ್ಷ ಜನರಿಂದ ಕೃಷಿ ಮೇಳ ವೀಕ್ಷಣೆ

ಬೆಂಗಳೂರು: ಜಿಟಿ ಜಿಟಿ ಮಳೆಯ ನಡುವೆಯೇ ಬೆಂಗಳೂರು ಗ್ರಾಮಾಂತರ, ಮಂಡ್ಯ, ತುಮಕೂರು, ರಾಮನಗರ, ಸೇರಿದಂತೆ ವಿವಿಧ ಜಿಲ್ಲೆಗಳ ರೈತರು ಮೇಳಕ್ಕೆ ಆಗಮಿಸಿ ಕೃಷಿಗೆ ಸಂಬಂಧಿಸಿದ ಅನೇಕ ತಂತ್ರಜ್ಞಾನ, ಕೃಷಿ ವಿಧಾನ,ನೂತನ ತಂತ್ರಜ್ಞಾನ ಬಗ್ಗೆ ಮಾಹಿತಿ ಪಡೆದುಕೊಂಡರು.

ಕೋವಿಡ್ ಹಿನ್ನೆಲೆಯಲ್ಲಿ ಕೃಷಿ ಮೇಳವನ್ನು ಭೌತಿಕ ಹಾಗೂ ಆನ್‌ಲೈನ್‌ನಲ್ಲಿ ವೀಕ್ಷಣೆಗೆ ಅವಕಾಶ ಮಾಡಿಕೊಡಲಾಗಿತ್ತು. ಒಟ್ಟು ಆನ್‌ಲೈನ್‌ನಲ್ಲಿ 5.20 ಲಕ್ಷ ಹಾಗೂ ಭೌತಿಕವಾಗಿ 1.70 ಲಕ್ಷಕ್ಕೂ ಅಧಿಕ ಜನರು ಮೇಳವನ್ನು ವೀಕ್ಷಿಸಿದ್ದಾರೆ. ಕೃಷಿ ಮೇಳದಲ್ಲಿ 7 ಸಾವಿರ ಮಂದಿ ರಿಯಾಯಿತಿ ದರದಲ್ಲಿ ಊಟ ಮಾಡಿದ್ದಾರೆ. ಗುರುವಾರದಿಂದ ಆರಂಭವಾಗಿರುವ ಕೃಷಿ ಮೇಳಕ್ಕೆ ಮೊದಲ ದಿನ ನೀರಿಕ್ಷಿಸಿದಷ್ಟು ಜನರು ಆಗಮಿಸಿರಲಿಲ್ಲ. ಶುಕ್ರವಾರ ಮಾತ್ರ ವಿವಿಧ ಜಿಲ್ಲೆಯಿಂದ ಆಗಮಿಸಿರುವ ರೈತರು ಮಳಿಗೆಗಳಲ್ಲಿ ಮಾಹಿತಿ ಪಡೆಯುವುದರ ಜೊತೆಗೆ ವ್ಯಾಪಾರ ವಹಿವಾಟು ಜೋರಾಗಿತು.

ಕೆಸರಿನಲ್ಲೇ ಕೃಷಿ ಮಳಿಗೆಗಳ ವೀಕ್ಷಣೆ: ಶನಿವಾರ ಹಾಗೂ ಭಾನುವಾರ ರಜಾ ದಿನಗಳಾಗಿದ್ದರಿಂದ ಕೃಷಿ ಮೇಳಕ್ಕೆ ಇಂದು ಮತ್ತು ನಾಳೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಮೇಳದಲ್ಲಿ ಭಾಗವಹಿಸುವ ನಿರೀಕ್ಷೆಯಿದೆ. ಜಿಟಿ ಜಿಟಿ ಮಳೆ ನಿರಂತರವಾಗಿ ಸುರಿಯುತ್ತಿರುವುದರಿಂದ ವಿಶ್ವವಿದ್ಯಾಲಯದ ಆವರಣ ಪೂರ್ತಿ ಕೆಸರಿನಿಂದ ಕೂಡಿದ್ದು, ಆ ಕೆಸರಿನಲ್ಲೇ ರೈತರು ಹಾಗೂ ಸಾರ್ವಜನಿಕರು ಉತ್ಸಾಹದಿಂದ ಭಾಗವಹಿಸುತ್ತಿದ್ದಾರೆ. ರೈತರ ಆದಾಯವನ್ನು ದ್ವಿಗುಣಗೊಳಿಸಲು ಕೃಷಿಗೆ ಉಪಯುಕ್ತವಾಗುವ ಅನೇಕ ಯಂತ್ರಗಳು, ಜಾನುವಾರುಗಳು, ರಸಗೊಬ್ಬರಗಳು ಸೇರಿದಂತೆ ಅನೇಕ ಮಳಿಗೆಗಳನ್ನು ಏವಿ ಆವರಣದಲ್ಲಿ ಹಾಕಲಾಗಿದೆ. ರೈತರು ಆ ಮಳಿಗೆಗಳಲ್ಲಿ ತಮಗೆ ಬೇಕಾದ ಮಾಹಿತಿಗಳನ್ನು ಪಡೆದುಕೊಳ್ಳಲು ತಲ್ಲೀನರಾಗಿದ್ದರು.







ಬಹುಪಯೋಗಿ ಪವರ್ ಇಂಟರ್ ಕಲ್ಟಿವೇಟರ್

ಜಮೀನಿನಲ್ಲಿ ಉಳುಮೆ ಮಾಡಲು ಎತ್ತುಗಳಿಗೆ ಪರ್ಯಾಯವಾಗಿ ಮಾರುತಿ ಕೃಷಿ ಉದ್ಯೋಗ ಸಂಸ್ಥೆ ಮೇಕ್ ಇನ್ ಇಂಡಿಯಾ ಯೋಜನೆಯಲ್ಲಿ ಮಲ್ಟಿಪರ್‌ಪಸ್ ಪವರ್ ಇಂಟರ್ ಕಲ್ಟಿವೇಟರ್‌ನ್ನು ತಯಾರಿಸಿದೆ. ಈ ಯಂತ್ರವನ್ನು ಬಳಕೆ ಮಾಡುವುದರಿಂದ ಮಳೆ ನೀರು ಹೆಚ್ಚಾಗಿ ಭೂಮಿಯಲ್ಲಿ ಇಂಗುತ್ತದೆ. ಈ ಯಂತ್ರದ ಸಹಾಯದಿಂದ ಸಾವಯುವ ಉಳುಮೆ ಕೂಡಾ ಮಾಡಬಹುದಾಗಿದೆ. ಮಣ್ಣನ್ನಲ್ಲಾಗುವ ಹಾರ್ಡ್ ಫ್ಯಾನ್ ಕಡಿಮೆಯಾಗುತ್ತದೆ. ಯಂತ್ರಕ್ಕೆ ಸುಮಾರು 500 ಕೆಜಿ ಸಾಮರ್ಥ್ಯದ ಟ್ರೈಲರನ್ನು ಕೂಡಾ ಅಳವಡಿಸಬಹುದಾಗಿದೆ.

ಲೇಜರ್ ಪೈಪ್ ಲೇನ್ ತಂತ್ರಜ್ಞಾನದಲ್ಲಿ ಜಲ ನಿರ್ವಹಣೆ

ಕಡಿಮೆ ಸಮಯದಲ್ಲಿ ಬೆಳೆಗೆ ಬೇಕಾಗಿರುವ ನೀರು ಹಾಯಿಸಲು ವಿನೂತನ ಮಾದರಿ ಪೈಪ್ ಅನು ಬೆಂಗಳೂರು ಕೃಷಿ ವಿವಿಯಲ್ಲಿ ಅಳವಡಿಕೆ ಮಾಡಿಕೊಳ್ಳಲಾಗಿದೆ. ಭೂಮಿಯ ತೇವಾಂಶವನ್ನು ಆಧರಿಸಿ ಬೆಳೆಗಳಿಗೆ ನೀರು ಹಾಯಿಸಿಬಹುದಾಗಿದೆ. ಈ ಪೈಪ್‌ಗಳನ್ನು ಒಂದು ಏಕರೆಗೆ ನಾಲ್ಕು ಮೀಟರ್ ಆಳತೆಯಲ್ಲಿ 30 ಪುಟ ಉದ್ದ ಮಾತ್ರ ಹಾಕಬೇಕು. ಹೀಗೆ ಅಳವಡಿಕೆ ಮಾಡಿದರೆ 20ನಿಮಿಷದಲ್ಲಿ ಬೆಳೆಗೆ ಬೇಕಾದ ನೀರು ಹಾಯಿಸಿಬಹುದಾಗಿದೆ. ಈ ವಿಧಾನವನ್ನು ಸೋಪ್ಪು ತರಕಾರಿ ಬೆಳೆಗಳಿಗೆ ಮಾತ್ರ ಅಳವಡಿಕೆ ಮಾಡಬಹುದು.



13-11-2021
Hd Pg 03

ಮೇಳದ 'ಸಲಹಾ ಸೇವಾ ಕೇಂದ್ರ'ಕ್ಕೆ ಉತ್ತಮ ಸ್ಪಂದನೆ • ಕೃಷಿ ಸುಧಾರಣೆಗೆ ಮಾಹಿತಿ

'ಕೃಷಿ' ಸಮಸ್ಯೆ; ತಜ್ಞರ ಸಲಹೆಗೆ ರೈತ 'ಖುಷಿ'

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಮಣ್ಣಿನ ಫಲವತ್ತತೆ ಹೆಚ್ಚಿಸುವುದು ಹೇಗೆ ? ಯಾವ ಬೆಳೆ ಬೆಳೆದರೆ ಲಾಭದಾಯಕ ? ಬೆಳೆ ರೋಗ ಹಾಗೂ ಕೀಟಗಳ ನಿವಾರಣೆಗೆ ಯಾವ ಔಷಧಿ ಸಿಂಪಡಿಸಬೇಕು? ಲಾಭದಾಯಕ ಕೃಷಿಗಾಗಿ ಯಾವೆಲ್ಲ ಪದ್ಧತಿ ಅನುಸರಿಸಬೇಕು? ಸಾವಯವ ಗೊಬ್ಬರ ತಯಾರಿಕೆ ಹೇಗೆ? ಕೃಷಿ ಜೊತೆಯಲ್ಲೇ ಜೇನು ಸಾಕಿದರೆ ಹಾಗೂ ಕಿರು ಅರಣ್ಯ ಸೃಷ್ಟಿಸಿದರೆ ಲಾಭವೇ? ...

ಈ ರೀತಿಯ ನೂರಾರು ಪ್ರಶ್ನೆಗಳಿಗೆ ಕೃಷಿ ತಜ್ಞರಿಂದ ರೈತರು ಉತ್ತರ ಪಡೆಯಲು 'ಕೃಷಿ ಮೇಳ' ವೇದಿಕೆಯಾಯಿತು. ಕೃಷಿ ಸಂಬಂಧಿತ ಸಮಸ್ಯೆಗಳನ್ನು ಎದುರಿಸುತ್ತಿರುವ ರೈತರಿಗೆ ಉಚಿತವಾಗಿ ಸಲಹೆ ನೀಡಲು ಮೇಳದಲ್ಲಿ 'ಕೃಷಿ ಸಲಹಾ ಕೇಂದ್ರ' ತೆರೆಯಲಾಗಿದ್ದು, ಉತ್ತಮ ಸ್ಪಂದನೆ ವ್ಯಕ್ತವಾಗಿದೆ.

ಬೆಂಗಳೂರು, ಚಿಕ್ಕಬಳ್ಳಾಪುರ, ರಾಮನಗರ, ಕೋಲಾರ, ತುಮಕೂರು, ಮಂಡ್ಯ, ಮೈಸೂರು ಸೇರಿದಂತೆ ಹಲವು ಜಿಲ್ಲೆಗಳ ರೈತರು ಮೇಳಕ್ಕೆ ಬರುತ್ತಿದ್ದಾರೆ. ಆ ಪೈಕಿ ಕೆಲವರು, ಕೃಷಿ ಸಲಹಾ ಕೇಂದ್ರಕ್ಕೆ ಭೇಟಿ ನೀಡಿ ಸಮಸ್ಯೆ ಹೇಳಿಕೊಳ್ಳುತ್ತಿದ್ದಾರೆ. ಅದನ್ನು ಆಲಿಸುತ್ತಿರುವ ತಜ್ಞರು, ಪರಿಹಾರದ ಸಲಹೆಯನ್ನು ಲಿಖಿತವಾಗಿ ನೀಡುತ್ತಿದ್ದಾರೆ.

'617 ರೈತರ ಭೇಟಿ'

'ಮೇಳಕ್ಕೆ ಬಂದಿದ್ದ ರೈತರ ಪೈಕಿ 617 ರೈತರು, ಸಲಹಾ ಸೇವಾ ಕೇಂದ್ರಕ್ಕೆ ಭೇಟಿ ನೀಡಿ ಸಮಸ್ಯೆಗೆ ಪರಿಹಾರ ಪಡೆದುಕೊಂಡಿದ್ದಾರೆ' ಎಂದು ಎನ್. ನಾಗರಾಜು ಮಾಹಿತಿ ನೀಡಿದರು.

'ಮೊದಲ ದಿನವಾದ ಗುರುವಾರ 186 ರೈತರು ಹಾಗೂ ಶುಕ್ರವಾರ 431 ರೈತರು ಕೇಂದ್ರದ ಸದುಪಯೋಗ ಪಡೆದುಕೊಂಡಿದ್ದಾರೆ' ಎಂದರು.

'ರೈತರ ಸಮಸ್ಯೆಗಳಿಗೆ ಪರಿಹಾರ ಒದಗಿಸುವುದು ಕೃಷಿ ಮೇಳದ ಉದ್ದೇಶ. ಹೀಗಾಗಿಯೇ ಸಲಹಾ ಸೇವಾ ಕೇಂದ್ರ ತೆರೆಯಲಾಗಿದೆ. ಒಬ್ಬೊಬ್ಬ ರೈತರದ್ದು ಒಂದೊಂದು ಪ್ರಶ್ನೆಯಾಗಿದ್ದು, ಇಡೀ ಕೃಷಿ ಕ್ಷೇತ್ರದ ಸಮಸ್ಯೆ ಚಿತ್ರಣ ನಮಗಾಗುತ್ತಿದೆ' ಎಂದು ಕೇಂದ್ರದ ಉಸ್ತುವಾರಿ ಡಾ. ಎನ್. ನಾಗರಾಜು 'ಪ್ರಜಾವಾಣಿ'ಗೆ ತಿಳಿಸಿದರು.

'ಒಣ ಬೇಸಾಯದಲ್ಲಿ ಕೃಷಿ ಸುಧಾರಣೆಗೆ ಏನು ಮಾಡಬೇಕೆಂಬ ಗೊಂದಲ ರೈತರಲ್ಲಿದೆ. ತೋಟಗಾರಿಕೆಯಲ್ಲಿ ಪಾಲಿಹೌಸ್ ಕೃಷಿಗೆ ಬೇಡಿಕೆ ಬಂದಿದ್ದು, ಈ ಬಗ್ಗೆ ತಿಳಿದುಕೊಳ್ಳಲು ರೈತರು ಪ್ರಯತ್ನಿಸುತ್ತಿದ್ದಾರೆ. ಪರಾಗ ಸ್ಪರ್ಶದಿಂದ ಇಳುವರಿ ಹೆಚ್ಚಿಸಲು ಜೇನು ಸಾಕಾಣಿಕೆಯಲ್ಲಿ ಆಸಕ್ತಿ ತೋರಿಸುತ್ತಿದ್ದಾರೆ. ಈ ಬಗ್ಗೆಯೇ ಹೆಚ್ಚು ರೈತರು ಪ್ರಶ್ನೆ ಕೇಳುತ್ತಿದ್ದಾರೆ.'

'ಬೆಳೆಗಳಲ್ಲಿ ಕಾಣಿಸುತ್ತಿರುವ ರೋಗಗಳು ಹಾಗೂ ಕೀಟಗಳ ಹಾವಳಿ ಬಗ್ಗೆ ರೈತರಲ್ಲಿ ಆತಂಕ ಶುರುವಾಗಿದೆ. ಇದಕ್ಕೆ ಔಷಧೋಪಚಾರವೇನು ? ಎಂಬುದನ್ನು ವಿಚಾರಿಸುತ್ತಿದ್ದಾರೆ. ಬೆಳೆಗೆ ಸೂಕ್ತ ಮಾರುಕಟ್ಟೆಗಾಗಿ ಹುಡುಕಾಟ ನಡೆಸುತ್ತಿದ್ದಾರೆ. ಕೃಷಿ ಜೊತೆಯಲ್ಲೇ ಕಿರು ಅರಣ್ಯ ಬೆಳೆಸುವ ಆಲೋಚನೆ ರೈತರಲ್ಲಿದೆ. ಇದಕ್ಕೆಲ್ಲ ಮಣ್ಣಿನ ಫಲವತ್ತತೆ ಹೇಗಿರಬೇಕು ? ಮಣ್ಣಿನ ಆರೋಗ್ಯ ಕಾಯ್ದುಕೊಳ್ಳಲು ಏನು ಮಾಡಬೇಕು ? ಎಂಬ ಬಗ್ಗೆಯೂ ರೈತರು ಸಲಹೆ ಪಡೆಯುತ್ತಿದ್ದಾರೆ' ಎಂದೂ ಹೇಳಿದರು.

'ಬಿತ್ತನೆ ಬೀಜಗಳ ಆಯ್ಕೆ ಹಾಗೂ ಯಾವ ಕಾಲದಲ್ಲಿ ಯಾವ ಬೆಳೆ ಬಿತ್ತನೆ ಮಾಡಬೇಕು ಎಂಬುದನ್ನು ರೈತರು ತಿಳಿದುಕೊಳ್ಳುತ್ತಿದ್ದಾರೆ. ರೋಗ ಹಾಗೂ ಕೀಟ ಮುಕ್ತ ಬೀಜಗಳಿಗೆ ಬೇಡಿಕೆ ಇರಿಸುತ್ತಿದ್ದಾರೆ. ರೈತರ ಪ್ರತಿಯೊಂದು ಸಮಸ್ಯೆಗಳಿಗೆ ಸಲಹೆ ನೀಡಿರುವ ತಜ್ಞರು, ಅದೇ ಸಮಸ್ಯೆಗಳ ಬಗ್ಗೆ ಹೆಚ್ಚಿನ ಅಧ್ಯಯನವನ್ನೂ ನಡೆಸಲಿದ್ದಾರೆ' ಎಂದೂ ನಾಗರಾಜು ಮಾಹಿತಿ ನೀಡಿದರು.

ಬೀಜ ವಿಜ್ಞಾನ, ಪಶು ವಿಜ್ಞಾನ, ಅರಣ್ಯ ಶಾಸ್ತ್ರ, ಆಹಾರ ವಿಜ್ಞಾನ, ಜೇನು ಕೃಷಿ, ಕೃಷಿ ಜೀವಶಾಸ್ತ್ರ, ಮಣ್ಣು ವಿಜ್ಞಾನ, ತೋಟಗಾರಿಕೆ ಸೇರಿದಂತೆ ವಿವಿಧ ವಿಭಾಗಗಳ ತಜ್ಞರು ಕೇಂದ್ರದಲ್ಲಿ ಲಭ್ಯವಿದ್ದಾರೆ. ಕೇಂದ್ರದಲ್ಲಿ 'ಕಿಯೊಸ್ಕ್' ಇರಿಸಲಾಗಿದ್ದು, ಅದರ ಮೂಲಕವೂ ಕೃಷಿ ಹಾಗೂ ಬೆಳೆಗಳ ಬಗ್ಗೆ ರೈತರು ಮಾಹಿತಿ ಪಡೆದುಕೊಳ್ಳುತ್ತಿದ್ದಾರೆ.

ಆನ್‌ಲೈನ್ ಮೂಲಕವೂ ಸೇವೆ: 'ರೈತರ ಪ್ರಶ್ನೆಗಳಿಗೆ ಆನ್‌ಲೈನ್ ಮೂಲಕವೂ ಉತ್ತರಿಸಲಾಗುತ್ತಿದೆ. ಆನ್‌ಲೈನ್ ವೇದಿಕೆಯಲ್ಲಿ 50 ರೈತರು ಉತ್ತರ ಪಡೆದುಕೊಂಡಿದ್ದಾರೆ' ಎಂದೂ ನಾಗರಾಜು ಹೇಳಿದರು.

> ರೈತರಿಂದ ರೈತರಿಗಾಗಿ ರೈತರಿಗೋಸ್ಕರ ಕೃಷಿ ಮೇಳ ನಡೆಯುತ್ತಿದೆ. ಇಲ್ಲಿಗೆ ಬಂದ ರೈತರು, ತಮ್ಮ ಸಮಸ್ಯೆಗಳಿಗೆ ಪರಿಹಾರ ಪಡೆದುಕೊಂಡು ಹೋಗಬೇಕು. ಇದಕ್ಕಾಗಿ ಕೃಷಿ ತಜ್ಞರ ತಂಡ ಸಜ್ಜುಗೊಳಿಸಲಾಗಿದೆ. ಕೇಂದ್ರಕ್ಕೆ ಬರುವ ರೈತರಿಗೆ ಮಾರ್ಗದರ್ಶನ ಮಾಡುತ್ತಿದೆ
>
> **ಡಾ. ಕೆ.ಸಿ. ನಾರಾಯಣಸ್ವಾಮಿ,** ಶಿಕ್ಷಣ ವಿಭಾಗದ ನಿರ್ದೇಶಕ



> ಜಮೀನಿನ ಮಣ್ಣಿನ ಬಗ್ಗೆ ತಜ್ಞರ ಸಲಹೆ ಪಡೆದಿದ್ದೇನೆ. ಮಣ್ಣು ಹದ ಮಾಡುವುದು ಹೇಗೆ? ಎಂಬಿತ್ಯಾದಿ ಸಲಹೆಗಳನ್ನು ತಜ್ಞರು ನೀಡಿದ್ದಾರೆ. ತಜ್ಞರು ಆಡು ಭಾಷೆಯಲ್ಲಿ ವಿವರಣೆ ನೀಡಿದ್ದು, ಬೇಗನೇ ಅರ್ಥವಾಯಿತು
>
> **ಪಿ. ಪ್ರವೀಣ್,** ಶ್ರೀರಂಗಪಟ್ಟಣದ ಪಾಲಹಳ್ಳಿ ರೈತ



> ಬೆಳೆ ರೋಗ ಸಮಸ್ಯೆಯಿಂದ ನೊಂದಿದ್ದ ನನಗೆ, ಕೃಷಿ ತಜ್ಞರು ಉತ್ತಮ ಸಲಹೆ ನೀಡಿದ್ದಾರೆ. ಇಂಥ ತಜ್ಞರು ತಾಲ್ಲೂಕಿಗೊಬ್ಬರಂತೆ ಇರಬೇಕು. ಕೃಷಿ ಮೇಳಕ್ಕಾಗಿ ಕಾಯದೇ ನಿತ್ಯವೂ ರೈತರಿಗೆ ಸಲಹೆ ಸಿಗುವ ವೇದಿಕೆ ರೂಪಿಸಲು ಸಂಬಂಧಪಟ್ಟ ಅಧಿಕಾರಿಗಳು ಮುಂದಾಗಬೇಕು
>
> **ತ್ಯಾಗರಾಜೇಶ,** ಪಾವಗಡದ ಕಪ್ಪಕ್ಕಿತನಹಳ್ಳಿಯ ರೈತ



13-11-2021
Pv Pv 5C

"When the vision is clear, strategy is easy"

ಕೃಷಿಮೇಳದಲ್ಲಿ ಗಮನಸೆಳೆಯುತ್ತಿದೆ ಕೆವಿಕೆ ಮಳಿಗೆ | ತೋಟಗಾರಿಕೆ, ಅರಣ್ಯೀಕರಣ ಇನ್ನಿತರ ಮಾಹಿತಿ

ರೈತರ ಆದಾಯ ದ್ವಿಗುಣಗೊಳಿಸಲು ಆದ್ಯತೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ (ಜಿಕೆವಿಕೆ) ನಡೆಯುತ್ತಿರುವ ಬೆಂಗಳೂರು ವಿವಿ ಕೃಷಿಮೇಳದಲ್ಲಿ ರೈತರ ಆದಾಯವನ್ನು ದ್ವಿಗುಣಗೊಳಿಸುವ ಕ್ರಮಗಳ ಬಗ್ಗೆ ಆದ್ಯತೆ ನೀಡಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಆಶಯದಂತೆ ರೈತರ ಆದಾಯವನ್ನು 2022ಕ್ಕೆ ದ್ವಿಗುಣಗೊಳಿಸಲು ಕೃಷಿ ವಿವಿ ಅಂಗಸಂಸ್ಥೆಯಾದ ಕೃಷಿ ವಿಜ್ಞಾನ ಕೇಂದ್ರ (ಕೆವಿಕೆ) ಮೇಳದಲ್ಲಿ ತೆರೆದಿರುವ ಬೃಹತ್ ಮಳಿಗೆಯಲ್ಲಿ ರೈತರಿಗೆ ಎಲ್ಲ ಮಾಹಿತಿಗಳನ್ನು ನೀಡಲಾಗುತ್ತಿದೆ.

» 2ನೇ ದಿನವೂ ತಪ್ಪಲಿಲ್ಲ ಮಳೆ ಕಾಟ

ರೈತರು ಬೆಳೆದಿರುವ ಬೆಳೆಗಳಿಗೆ ಹೆಚ್ಚಿನ ಬೆಲೆ ಸಿಗುವಂತೆ ಮಾಡಲು ಮೌಲ್ಯವರ್ಧನೆ ಹಾಗೂ ಮಾರುಕಟ್ಟೆ ಜ್ಞಾನ, ಕಡಿಮೆ ಬಂಡವಾಳದಲ್ಲಿ ಹೆಚ್ಚಿನ ಇಳುವರಿ, ವ್ಯವಸಾಯದ ವೆಚ್ಚ ಕಡಿತ ಹಾಗೂ ಬೆಳೆಗಳ ವೈವಿಧ್ಯ ಸೇರಿ ಇನ್ನಿತರ ಮಾಹಿತಿಗಳು ಒಂದೇ ಸೂರಿನಲ್ಲಿ ಲಭ್ಯವಿದೆ.

ಕರೊನಾ ನಂತರ ನಗರಗಳಿಂದ ವಾಪಸ್ ತಮ್ಮ ಊರುಗಳಿಗೆ ಬರುತ್ತಿರುವವರ ಸಂಖ್ಯೆ ಹೆಚ್ಚಾಗಿದೆ. ವಿಶೇಷವಾಗಿ ಬೆಂಗಳೂರು, ಬೆಂ. ಗ್ರಾಮಾಂತರ, ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ ಮತ್ತು ರಾಮನಗರ ಜಿಲ್ಲೆಗಳಲ್ಲಿ ಹೀಗೆ ವಾಪಸ್ ಬಂದಿರುವವರಿಗೆ ಸ್ವಾವಲಂಬನೆ ಬದುಕು ರೂಪಿಸಿಕೊಳ್ಳುವ ಸಲುವಾಗಿ ಕೆವಿಕೆ ಕೃಷಿ, ತೋಟಗಾರಿಕೆ, ಅರಣ್ಯೀಕರಣ, ಮೀನುಗಾರಿಕೆ, ಹೈನುಗಾರಿಕೆ ಮತ್ತು ಕೋಳಿಸಾಕಣೆ ಮತ್ತಿತರ ಅವಕಾಶಗಳು ಹಾಗೂ ಆದಕ್ಕೆ ಪೂರಕವಾಗಿ ನೂತನ ತಂತ್ರಜ್ಞಾನ ಮೂಲಕ ಸಲಹೆಗಳನ್ನು ನೀಡುತ್ತಿದೆ.

ಬೀಜದ ದಂಟು ಚಾಕೊಲೇಟ್: ಕೃಷಿ ಮೇಳದಲ್ಲಿ ಬೀಜದ ದಂಟು ಚಾಕೊಲೇಟ್ ನೋಡುಗರ ಗಮನಸೆಳೆಯುತ್ತಿದೆ. ದ್ವಿದಳ ಬೆಳೆಗಳ ಗುಂಪಿಗೆ ಸೇರಿರುವ ಬೀಜದ ದಂಟಿನಿಂದ ಉಂಡೆ, ಚಿಕ್ಕಿ, ಮಾಲ್ಟ್, ಚಪಾತಿ, ಹಿಟ್ಟು, ಬಿಸ್ಕತ್, ಕೇಕ್ ಹಾಗೂ ಮಾಲ್ಟ್ ಪುಡಿ ಮಾಡಲಾಗುತ್ತಿದೆ. ಪೌಷ್ಟಿಕ ಆಂಶವಿರುವ ದಂಟಿನ ಬೀಜವನ್ನು ಸೈನಿಕರಿಗೆ ಶಕ್ತಿ ಹೆಚ್ಚಿಸಲು ನೀಡಲಾಗುತ್ತದೆ. ಪುರಾತನ ಕಾಲದಿಂದಲೂ ಇದನ್ನು ಬಳಸಲಾಗುತ್ತಿದೆ. ದಂಟಿನ ಬೀಜದಲ್ಲಿ ಪ್ರೋಟಿನ್, ಕ್ಯಾಲ್ಸಿಯಂ, 'ಎ' ಜೀವಸತ್ವ, ರಂಜಕ ಮತ್ತು ಕಬ್ಬಿಣ ಅಂಶಗಳು ಹೆಚ್ಚಿನ ಪ್ರಮಾಣದಲ್ಲಿರುತ್ತದೆ.



ಜಿಕೆವಿಕೆಯಲ್ಲಿ ನಡೆಯುತ್ತಿರುವ ಕೃಷಿಮೇಳದಲ್ಲಿ 'ಕೆವಿಕೆ' ಸ್ಥಾಪಿಸಿರುವ ಬೃಹತ್ ಮಳಿಗೆಯಲ್ಲಿರುವ ವಿವಿಧ ಪ್ರಾತ್ಯಕ್ಷಿಕೆಗಳು.

ಔಷಧ ಸಿಂಪಡಿಸುವ ಡ್ರೋನ್

ವಿವಿಧ ಕ್ಷೇತ್ರಗಳಲ್ಲಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತ, ಯಶಸ್ಸು ಕಂಡಿರುವ ಡ್ರೋನ್ ಅನ್ನು ಕೃಷಿ ಚಟುವಟಿಕೆಗಳಿಗೂ ಪರಿಚಯಿಸಲಾಗಿದೆ. ಬೃಹತ್ ಗಾತ್ರದ ಡ್ರೋನ್ ಅನ್ನು 5 ಲೀಟರ್ ಸಾಮರ್ಥ್ಯದ ರಾಸಾಯನಿಕ ಔಷಧ ತುಂಬಿದ ಟ್ಯಾಂಕ್‌ಗೆ ಅಳವಡಿಸಿ ಭತ್ತದ ಗದ್ದೆಯಲ್ಲಿ ಔಷಧ ಸಿಂಪಡಿಸಬಹುದು. ಐದಾರು ಕಂಪನಿಗಳು ಹೊಸ ಆವಿಷ್ಕಾರ ಮೂಲಕ ಇದನ್ನು ಅಭಿವೃದ್ಧಿಪಡಿಸಿವೆ. 5 ನಿಮಿಷದಲ್ಲಿ ಒಂದು ಎಕರೆ ಬೆಳೆಗೆ ಔಷಧ ಸಿಂಪಡಿಸಬಹುದು. ಇದ್ಕಕಾಗಿ 250-300 ರೂ. ವೆಚ್ಚವಾಗುತ್ತದೆ. ಯಂತ್ರಗಳಿಗೆ 10 ಲಕ್ಷ ರೂ. ಬೆಲೆ ಇದೆ. ಆದನ್ನು ಖರೀದಿಸಿ ಬಾಡಿಗೆ ರೂಪದಲ್ಲಿ ರೈತರು ಹಣ ಸಂಪಾದಿಸಬಹುದು.

ದ್ರವರೂಪದ ನ್ಯಾನೋ ಡಿಎಪಿ

ಕೇಂದ್ರ ಸರ್ಕಾರ ವರ್ಷಕ್ಕೆ ಅಂದಾಜು 60-70 ಸಾವಿರ ಕೋಟಿ ರೂ.ಗಳನ್ನು ರಸಗೊಬ್ಬರ ಸಬ್ಸಿಡಿಗೆಂದು ನೀಡುತ್ತಿದೆ. ಇದರ ಹೊರೆಯನ್ನು ಕಡಿಮೆಗೊಳಿಸಲು ಹಾಗೂ ರೈತರಿಗೆ ಅನುಕೂಲಕ್ಕಾಗಿ ಇಫ್ಕೋ ಕಂಪನಿಯು ನ್ಯಾನೋ ಯೂರಿಯಾ ಅಭಿವೃದ್ಧಿಪಡಿಸಿ ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಇದನ್ನು ನೀರಿನಲ್ಲಿ ಮಿಶ್ರಣ ಮಾಡಿ ನಾಟಿ ಮಾಡಿದ 25-30 ದಿನದಲ್ಲಿ ಹಾಗೂ 40-45 ದಿನದಲ್ಲಿ ಬೆಳೆಗಳಿಗೆ ಸಿಂಪಡಿಸಬಹುದು. ಎಕರೆಗೆ ಒಂದು ಬಾಟಲ್‌ನಂತೆ ಸಿಂಪಡಿಸಬಹುದು. ಇದಕ್ಕೆ ರೈತರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಹಾಗಾಗಿ, ಬರುವ ವರ್ಷದಲ್ಲಿ ದ್ರವರೂಪದಲ್ಲಿ ನ್ಯಾನೋ ಡಿಎಪಿ, ಜಿಂಕ್ ಮತ್ತು ಕಾಪರ್ ಮಾರುಕಟ್ಟೆಗೆ ತರಲು ಕಂಪನಿ ಉತ್ಸುಕವಾಗಿದೆ.

ಮಳೆಯಲ್ಲೂ ಬತ್ತದ ಉತ್ಸಾಹ

ಕೃಷಿಮೇಳದ 2ನೇ ದಿನವೂ ಮಳೆಯಿಂದ ಸಾರ್ವಜನಿಕರು ಸಮಸ್ಯೆ ಅನುಭವಿಸುವಂತಾಯಿತು. ಕೆಸರುಗದ್ದೆಯಂತಾಗಿದ್ದ ಆವರಣದಲ್ಲಿ ಬೇರೆ ಉಪಾಯವಿಲ್ಲದೆ ವಿವಿಧ ಮಳಿಗೆಗಳಿಗೆ ಭೇಟಿ ನೀಡುವಂತಾಯಿತು. ಮೊದಲ ಮಳೆ ಬಗ್ಗೆ ಆರಿವಿದ್ದ ಕೆಲವರು ಕೊಡೆ ತಂದಿದ್ದರು. ಸಂಘ- ಸಂಸ್ಥೆಯ ನೂರಾರು ಸದಸ್ಯರು, ನಗರದ ವಿವಿಧ ಶಾಲೆಗಳ ಮಕ್ಕಳು ಹಾಗೂ ಕಾಲೇಜು ವಿದ್ಯಾರ್ಥಿಗಳು ಮಳೆ ಲೆಕ್ಕಿಸದೆ ಮೇಳಕ್ಕೆ ಆಗಮಿಸಿದ್ದರು.

ಚುಚ್ಚದ ಜೇನು



ಮುಜೆಂಟಿ, ಮೊಜೆಂಟಿ, ಮಿಸ್ರಿ, ನಸ್ರಿ, ರಾಳಜೇನು, ನುಸರಿಜೇನು, ಕಿರುಜೇನು ಹೀಗೆ ಅನೇಕ ಹೆಸರುಗಳಿಂದ ಕರೆಯಲಾಗುವ 'ಚುಚ್ಚದ ಜೇನು' ಸಾಕಿದರೆ ಅಧಿಕ ಲಾಭ ಗಳಿಸಬಹುದು. ಕೃಷಿಭೂಮಿ ಹಾಗೂ ನಗರ ಪ್ರದೇಶಗಳಲ್ಲಿ ಜೇನು ನೊಣಗಳ ಪರಾಗಸ್ಪರ್ಶದಿಂದ ಹೆಚ್ಚಿನ ಇಳುವರಿ ಬರಲಿದೆ. ಸಾಗಣೆ ಸುಲಭವಾಗಿದ್ದು, ಈ ಜೇನುಹುಳಗಳು ಕಚ್ಚುವುದಿಲ್ಲ. ವರ್ಷಕ್ಕೆ 2-3 ಬಾರಿ ಜೇನುತುಪ್ಪ ತೆಗೆದು ಮಾರಾಟ ಮಾಡಬಹುದು. ಕೇರಳದಲ್ಲಿ ಒಂದು ಕೆ.ಜಿ. ಜೇನು ತಪ್ಪಕ್ಕೆ 4 ಸಾವಿರ ರೂ. ಇದೆ. ಕ್ಯಾನ್ಸರ್ ಮತ್ತಿತರ ಗಂಭೀರ ಕಾಯಿಲೆ ನಿವಾರಿಸುವ ಗುಣ ಇದರಲ್ಲಿದೆ. ಕರ್ನಾಟಕದಲ್ಲಿ ಇದರ ಬಗ್ಗೆ ಜನರಿಗೆ ಹೆಚ್ಚಿನ ಅರಿವು ಮೂಡಿಸಬೇಕಿದೆ. ಕೃಷಿ ಮೇಳದಲ್ಲಿ ಇದರ ಬಗ್ಗೆ ರೈತರಿಗೆ ಮಾಹಿತಿ ನೀಡಲಾಗುತ್ತಿದೆ.

ಸಿರಿಧಾನ್ಯಗಳ ಕೇಕ್

ಮೈದಾ ಹಿಟ್ಟಿಗೆ ಬದಲಾಗಿ ಇದೀಗ ಸಿರಿಧಾನ್ಯಗಳ ಹಿಟ್ಟಿನಲ್ಲಿ ಕೇಕ್ ತಯಾರಿಸಬಹುದು. ಪೈನಾಪಲ್, ವೆನಿಲಾ, ಸ್ಟಾಬೆರಿ, ಚಾಕೊಲೇಟ್ ಕೇಕ್, ಫ್ರೂಟ್ಸ್ ಕೇಕ್ ಹೀಗೆ ಎಲ್ಲ ಸ್ವಾದದ ಕೇಕ್ ಸಿದ್ಧಪಡಿಸಬಹುದು. ಬೆಂಗಳೂರಿನ ಬೇಕರಿ ತರಬೇತಿ ಕೇಂದ್ರವು ಜಿಕೆವಿಕೆ ಆವರಣದ ಕೃಷಿ ಮೇಳದಲ್ಲಿ ಈ ಕುರಿತಾಗಿ ಮಾಹಿತಿ ನೀಡುತ್ತಿದೆ.


ಮಳೆಯಿಂದ ಆವರಣ ಕೆಸರುಮಯವಾಗಿದ್ದರಿಂದ ಜನರ ಓಡಾಟಕ್ಕೆ ಮಾಡಿದ್ದ ತಾತ್ಕಾಲಿಕ ವ್ಯವಸ್ಥೆ.

1.76 ಲಕ್ಷ ಜನ

ಕೃಷಿ ಮೇಳದ 2ನೇ ದಿನವಾದ ಶುಕ್ರವಾರದಂದು 1.76 ಲಕ್ಷ ಜನರು ಬಂದಿದ್ದರು. ಆನ್‌ಲೈನ್‌ನಲ್ಲಿ 5.20 ಲಕ್ಷ ಮಂದಿ ವೀಕ್ಷಣೆ ಮಾಡಿದ್ದಾರೆ. 7 ಸಾವಿರ ಮಂದಿ ಊಟ ಮಾಡಿದ್ದಾರೆ. ಬೆಂಗಳೂರು ನಗರ, ಬೆಂ.ಗ್ರಾಮಾಂತರ, ರಾಮನಗರ ಜಿಲ್ಲೆಗಳ ಜಿಲ್ಲಾ ಮಟ್ಟದ, ತಾಲೂಕು ಮಟ್ಟದಲ್ಲಿ ಆತ್ಯುತ್ತಮ ಯುವ ರೈತ, ರೈತ ಹಾಗೂ ರೈತ ಮಹಿಳೆಗಳಿಗೆ ಆತ್ಯುತ್ತಮ ರೈತ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಭಾನುವಾರ (ನ.14) ಮೇಳಕ್ಕೆ ತೆರೆಬೀಳಲಿದೆ.



50 ಕೋಳಿ ಸಾಕಬಹುದಾದ ವಿಶೇಷ ಸ್ಟ್ಯಾಂಡ್

ಕೋಳಿ ಸಾಕಾಣಿಕೆ ಉದ್ಯಮ ಆರಂಭಿಸಬೇಕೆಂದರೆ ಲಕ್ಷಾಂತರ ರೂ. ಹಣ ಅತ್ಯಗತ್ಯ. ಇದರ ನಿರ್ವಹಣೆ ಮಾಡುವುದು ಸುಲಭದ ಮಾತಲ್ಲ. ಆದರೆ ಅತ್ಯಂತ ಕಡಿಮೆ ಖರ್ಚಿನಲ್ಲಿ ಸಣ್ಣ ಪ್ರಮಾಣದಲ್ಲಿ ಕೋಳಿ ಸಾಕಾಣಿಕೆ ಉದ್ಯಮ ಆರಂಭಿಸಲು ಅನುಕೂಲವಾಗುವಂತಹ ಹೊಸ ವಿಧಾನವನ್ನು ಜಿಕೆವಿಕೆ ಆವರಣದ ಕೃಷಿ ಮೇಳದಲ್ಲಿ ಪರಿಚಯಿಸಲಾಗಿದೆ. ಅದನ್ನು ಅನುಸರಿಸಿ ಗೃಹಿಣಿಯರು ಸಣ್ಣ ಪ್ರಮಾಣದಲ್ಲಿ ಮನೆಗಳಲ್ಲಿಯೇ ಕೋಳಿ ಸಾಕಾಣಿಕೆ ಮಾಡಬಹುದು. ಅಝೂ ಫೌಲ್ಟಿ ಎಕ್ವಿಪ್‌ಮೆಂಟ್ ಸಂಸ್ಥೆಯು 50 ಕೋಳಿಗಳನ್ನು ಸಾಕಬಹುದಾದ ಪುಟಾಣಿ ಸ್ಟ್ಯಾಂಡ್ ಅನ್ನು ಸಿದ್ಧಪಡಿಸಿದೆ. ಮನೆಯ ಕೊಟ್ಟಿಗೆ, ಹಿತ್ತಲು ಅಥವಾ ಮನೆಯ ಪಕ್ಕದ ನೆರಳಿರುವ ಜಾಗದಲ್ಲಿ ಕೋಳಿ ಸಾಕಾಣಿಕೆ ಮಾಡಬಹುದು. 50 ಕೋಳಿಗಳು ಸಾಕಬಹುದಾದ ಸ್ಟ್ಯಾಂಡ್ ಇದಾಗಿದೆ. ಈ ಸ್ಟ್ಯಾಂಡ್‌ನಲ್ಲೇ ಆಹಾರ ಮತ್ತು ನೀರು ಸೇವಿಸಲು ಅನುಕೂಲವಾಗುವಂತೆ ಪೈಪ್ ಮಾದರಿಯ ವ್ಯವಸ್ಥೆ ಮತ್ತು ಕೋಳಿ ಇಡುವ ಮೊಟ್ಟೆಗಳನ್ನು ಸಂಗ್ರಹಿಸಿಡಲು ವ್ಯವಸ್ಥೆ ಇದೆ. ಜನರು ಇದರ ಬಗ್ಗೆ ಹೆಚ್ಚು ಆಸಕ್ತಿವಹಿಸಿ ವೀಕ್ಷಿಸಿದರು.


ಮೀನುಗಾರಿಕೆ ಪ್ರಾತ್ಯಕ್ಷಿಕೆ.

ತೆಂಗಿನಕಾಯಿ ಸಿಪ್ಪೆ ಸುಲಿಯುವ ಯಂತ್ರ

ತೆಂಗಿನಕಾಯಿ ಸಿಪ್ಪೆ ಸುಲಿಯಲು ಕೃಷಿ ಕಾರ್ಮಿಕರಿಗಾಗಿ ರೈತರ ಪರದಾಟ ತಪ್ಪಿಸಲು ಎಆರ್‌ಎಸ್ ಇಂಜಿನಿಯರಿಂಗ್ ಸಂಸ್ಥೆಯು ಪರಿಹಾರ ಕಲ್ಪಿಸಿದೆ. ಗಂಟೆಗೆ 800ರಿಂದ 1,000 ತೆಂಗಿನಕಾಯಿ ಸಿಪ್ಪೆ ಸುಲಿಯುವ ಯಂತ್ರವನ್ನು ಸಂಶೋಧಿಸಿದೆ. ಪ್ರತಿ 3 ಸೆಕೆಂಡಿಗೆ ಒಂದು ತೆಂಗಿನಕಾಯಿಯ ಸಿಪ್ಪೆಯನ್ನು ತೆಗೆಯಲಿದೆ. ಇದು ಎಲೆಕ್ಟ್ರಿಕ್ ಯಂತ್ರವಾಗಿದ್ದು, ವಿದ್ಯುತ್‌ನಿಂದ ಸುಲಭವಾಗಿ ಬಳಸಬಹುದು.


ಹಲವು ಜಿಲ್ಲೆಗಳ ಕೃಷಿ ಸಾಧಕರಿಗೆ ಶುಕ್ರವಾರ ಕೃಷಿಮೇಳದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಆಕರ್ಷಕ ರಾಶಿ ಪೂಜೆ

ರಾಶಿಪೂಜೆ ಬಗ್ಗೆ ಜನರಿಗೆ ಅರಿವು ಮೂಡಿಸುವ ಉದ್ದೇಶದಿಂದ ಕೃಷಿ ಇಲಾಖೆ 7 ಸಿರಿಧಾನ್ಯ ಹಾಗೂ 9 ದ್ವಿದಳ ಧಾನ್ಯಗಳ ಮೂಲಕ ರಾಶಿಯನ್ನು ಅಲಂಕರಿಸಿದ್ದು, ಆದರ ಮೇಲೆ ಕಳಸವನ್ನು ಪ್ರತಿಷ್ಠಾಪಿಸಿದೆ. ಇದು ನೋಡುಗರನ್ನು ಆಕರ್ಷಿಸುತ್ತಿದೆ. ರಾಶಿಪೂಜೆ ಎಂಬುದು ನಗರದಲ್ಲಿ ಹೆಚ್ಚಿನವರಿಗೆ ತಿಳಿದಿಲ್ಲ. ಹಾಗಾಗಿ, ಅವರಿಗೆ ಮಾಹಿತಿ ನೀಡಲು ಇದನ್ನು ಅಲಂಕರಿಸಲಾಗಿದೆ ಎನ್ನುತ್ತಾರೆ ಇಲಾಖೆ ಸಿಬ್ಬಂದಿ.



ರಾಗಿ ಲಡ್ಡು

ಕೃಷಿಮೇಳದಲ್ಲಿ ಮತ್ತೊಂದು ಆಕರ್ಷಣೆ ಎಂದರೆ, ರಾಗಿಯಿಂದ ಮಾಡಿರುವ ಪೌಷ್ಟಿಕ ಲಡ್ಡು. ಈಗಾಗಲೇ ಮಾರುಕಟ್ಟೆಗಳಲ್ಲಿ ತರಹೇವಾರಿ ಲಡ್ಡುಗಳು ಬಂದಿವೆ. ಆದರೆ, ಮೇಳದಲ್ಲಿ ಮೊದಲ ಬಾರಿಗೆ ರಾಗಿಯಿಂದ ತಯಾರಿಸಿರುವ ಪೌಷ್ಟಿಕ ಲಡ್ಡು ಗಮನ ಸೆಳೆಯುತ್ತಿದೆ. ಇದನ್ನು ಸೇವಿಸಿದರೆ ಆರೋಗ್ಯ ವೃದ್ಧಿಯಾಗಲಿದೆ ಎಂಬ ಕಾರಣಕ್ಕೆ ಹೆಚ್ಚಿನ ಸಂಖ್ಯೆಯ ಜನರು ಲಡ್ಡು ಖರೀದಿಯಲ್ಲಿ ತೊಡಗಿದ್ದುದು ಕಂಡುಬಂತು.


ಪಂಪ್‌ಸೆಟ್ ವೀಕ್ಷಿಸಿದ ಜನ.

ಲಾಭದಾಯಕ ಡಾರ್ಪರ್ ಕುರಿ

ದಕ್ಷಿಣ ಆಫ್ರಿಕಾ ಮೂಲದ ಡಾರ್ಪರ್ ಕುರಿ ಕೃಷಿಮೇಳದಲ್ಲಿ ಜನಮನ ಸೆಳೆಯುತ್ತಿದೆ. ಉತ್ಕೃಷ್ಟ ತಳಿಯ ಕುರಿಯಾಗಿರುವ ಇದು, ಕಪ್ಪು ಮತ್ತು ಬಿಳಿ ವರ್ಣಗಳಲ್ಲಿದೆ. ಮಾಂಸದ ತಳಿಯಾಗಿದ್ದು, ಶೀಘ್ರ ಗತಿಯಲ್ಲಿ ಬೆಳವಣಿಗೆ ಹೊಂದುತ್ತದೆ. 3-4 ತಿಂಗಳಲ್ಲಿ 30 ರಿಂದ 40 ಕೆ.ಜಿ. ತೂಕ ಹೆಚ್ಚಿಸಿಕೊಳ್ಳುತ್ತದೆ. ಎಲ್ಲ ರೀತಿಯ ವಾತಾವರಣಗಳಲ್ಲಿ ಬೆಳೆಯುತ್ತದೆ. ಹುಟ್ಟಿದಾಗ ಕುರಿಮರಿಯೇ 4 ರಿಂದ 6 ಕೆ.ಜಿ. ತೂಕವಿರುತ್ತದೆ. ಒಂದೇ ವರ್ಷದಲ್ಲಿ ಹೆಣ್ಣು ಕುರಿ 80ರಿಂದ 85 ಕೆ.ಜಿ. ತೂಗುತ್ತದೆ. ಗಂಡು ಕುರಿ 105ರಿಂದ 110 ಕೆ.ಜಿ. ತೂಕ ಹೊಂದುತ್ತದೆ. ಪ್ರತಿ ಕೆ.ಜಿ. ಮಾಂಸ 2,000ರಿಂದ 2,500 ರೂ.ಗಳಿಗೆ ಮಾರಾಟವಾಗುತ್ತದೆ. 1 ಕುರಿ 3 ಲಕ್ಷ ರೂ. ಬೆಲೆಗೆ ಮಾರಾಟವಾಗುತ್ತದೆ. 70ರಿಂದ 80 ಕೆ.ಜಿ. ತೂಕದ ಡಾರ್ಪರ್ ಸುಮಾರು 5 ಲಕ್ಷ ರೂ. ಬೆಲೆಬಾಳುತ್ತದೆ.



ಹೆಚ್ಚು ಸಕ್ಕರೆ ಅಂಶವುಳ್ಳ 'ಸಿಓವಿಸಿ 18061': ಕೃಷಿ ಸಂಶೋಧನಾ ಕೇಂದ್ರದಿಂದ ಅಭಿವೃದ್ಧಿ

ಬೆಲ್ಲ ತಯಾರಿಕೆಗೆ ಅತ್ಯುತ್ತಮ ಈ ತಳಿ

• ಸಚ್ಚಿದಾನಂದ ಕುರಗುಂದ

ಬೆಂಗಳೂರು: ಬೆಲ್ಲ ತಯಾರಿಕೆಗೆ ಅತ್ಯುತ್ತಮವಾಗಿರುವ ಹೊಸ ಕಬ್ಬು ತಳಿ ಕೃಷಿ ಮೇಳದಲ್ಲಿ ರೈತರ ಆಕರ್ಷಣೆಯ ಕೇಂದ್ರವಾಗಿದೆ.

ಹೊಸದಾಗಿ ಅಭಿವೃದ್ಧಿಪಡಿಸಿರುವ 'ಸಿಓವಿಸಿ 18061' ಕಬ್ಬು ತಳಿ ಈ ಬಾರಿಯ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಕೃಷಿ ಮೇಳದಲ್ಲಿ ರೈತರನ್ನು ತನ್ನತ್ತ ಸೆಳೆಯುತ್ತಿದೆ. ಕೃಷಿ ವಿಶ್ವವಿದ್ಯಾಲಯದ ಮಂಡ್ಯದ ವಿ.ಸಿ. ಫಾರ್ಮ್‌ನ ವಲಯ ಕೃಷಿ ಸಂಶೋಧನಾ ಕೇಂದ್ರದಲ್ಲಿ ಈ ತಳಿಯನ್ನು ಅಭಿವೃದ್ಧಿ ಪಡಿಸಲಾಗಿದೆ.

ಈ ಕಬ್ಬು ತಳಿಯಿಂದ ಎಕರೆಗೆ 70ರಿಂದ 80 ಟನ್ ಇಳುವರಿ ದೊರೆಯುತ್ತದೆ. ಹೆಚ್ಚು ಸಕ್ಕರೆ ಅಂಶ ಇರುವುದರಿಂದ ಬೆಲ್ಲ ತಯಾರಿಕೆಗೆ ಹೆಚ್ಚು ಉಪಯುಕ್ತವಾಗಿದೆ. ಈ ತಳಿಯಲ್ಲಿ ನೀರಿನ ಅಂಶ ಕಡಿಮೆ ಇರುವುದರಿಂದ 'ಸುಕ್ರೋಸ್' ಹೆಚ್ಚಾಗಿದ್ದು, ಶೇಕಡ 19ರಿಂದ 20ರಷ್ಟಿದೆ.



ಬೆಂಗಳೂರಿನ ಜಿಕೆವಿಕೆ ಆವರಣದಲ್ಲಿ ಆಯೋಜಿಸಿರುವ ಕೃಷಿ ಮೇಳದಲ್ಲಿ ಶುಕ್ರವಾರ ಹೊಸ ಕಬ್ಬು ತಳಿ 'ಸಿಓವಿಸಿ 18061' ವೀಕ್ಷಿಸಿದ ವಿದ್ಯಾರ್ಥಿಗಳು

–ಪ್ರಜಾವಾಣಿ ಚಿತ್ರ: ಆನೂವ್ ರಾಘ್ಟಿ.

'ಡಿಸೆಂಬರ್' ನಂತರ ಕಬ್ಬು ಬೆಳೆ ನಾಟಿ ಮಾಡುವುದು ಸಾಮಾನ್ಯ. ಆದರೆ, ಈ ತಳಿಯನ್ನು ಎಲ್ಲ ಕಾಲದಲ್ಲಿಯೂ ನಾಟಿ ಮಾಡಬಹುದಾಗಿದೆ. ಆದರೂ, ಜನವರಿ ಮತ್ತು ಫೆಬ್ರುವರಿ ಅವಧಿಯಲ್ಲಿ ನಾಟಿ ಮಾಡುವುದು ಉತ್ತಮ' ಎಂದು ಕೃಷಿ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಯೂಸುಫ್ ಅಬ್ಬಾಸ್ ತಿಳಿಸಿದ್ದಾರೆ.

'ಎರಡು ಅಥವಾ ಮೂರು ಬಾರಿ ಉತ್ತಮ 'ಕೂಳೆ' ಬೆಳೆ ಸಹ ತೆಗೆಯಬಹುದು. ಸೂಲಂಗಿಯು ಶೇಕಡ 10ರಿಂದ 20ರಷ್ಟು ಮಾತ್ರ ಇದೆ. ಕಬ್ಬು ಬೆಳೆಯುವಾಗ ಸಾಲುಗಳಲ್ಲಿ ಅಂತರ ಕಾಪಾಡುವುದು ಸಹ ಮುಖ್ಯ. ಈ ತಳಿಯನ್ನು ಹಾಕುವಾಗ ಸಾಲುಗಳ ನಡುವೆ 5 ಅಡಿ ಅಂತರ ಕಾಪಾಡಬೇಕು. 12ರಿಂದ 14 ತಿಂಗಳು ಅವಧಿಯಲ್ಲಿ ಇದು ಕಟಾವಿಗೆ ಬರುತ್ತದೆ' ಎಂದು ಅವರು ವಿವರಿಸಿದ್ದಾರೆ.

'2018ರಲ್ಲಿ ಕೊಯಮತ್ತೂರಿನ ಕಬ್ಬು ತಳಿ ಸಂಸ್ಥೆಯಲ್ಲಿ ಈ ತಳಿಯನ್ನು ಅಭಿವೃದ್ಧಿಪಡಿಸುವ ಪ್ರಕ್ರಿಯೆ ಆರಂಭವಾಯಿತು. ಈ ಸಂಸ್ಥೆಯಲ್ಲಿ ಭಾರತ ಮತ್ತು ಬ್ರೆಜಿಲ್ ಸೇರಿದಂತೆ ವಿವಿಧ ದೇಶಗಳಲ್ಲಿನ ತಳಿಗಳನ್ನು ಸಂಗ್ರಹಿಸಿ ಸಂಶೋಧನೆ ಕೈಗೊಳ್ಳಲಾಗುತ್ತಿದೆ. ಸೂಲಂಗಿ ಮತ್ತು ಸಕ್ಕರೆ ಅಂಶಗಳನ್ನು ಪ್ರಮುಖವಾಗಿ ಪರಿಗಣಿಸಿ ಈ ತಳಿಯನ್ನು ಅಭಿವೃದ್ಧಿಪಡಿಸಲಾಯಿತು. ಸತತ ಮೂರು ವರ್ಷಗಳ ಕಾಲ ಸಂಶೋಧನೆ ಕೈಗೊಂಡ ಬಳಿಕ ಬಿಡುಗಡೆ ಮಾಡಲಾಗಿದೆ. ಈ ತಳಿ 12ರಿಂದ 13 ಅಡಿಯಷ್ಟು ಎತ್ತರ ಬೆಳೆಯುತ್ತದೆ' ಎಂದೂ ಹೇಳಿದ್ದಾರೆ.

ಒಂದು ಸಾವಿರ ಲೀಟರ್ ಕಬ್ಬಿನ ಹಾಲಿಗೆ ಒಂದು ಕ್ವಿಂಟಲ್ ಬೆಲ್ಲ ದೊರೆಯುತ್ತದೆ. ಅಂದರೆ ಸುಮಾರು ಶೇಕಡ 10.8ರವರೆಗೂ ಬೆಲ್ಲವೂ ಇದರಿಂದ ದೊರೆಯುತ್ತದೆ. ಈ ತಳಿಯನ್ನು ಸಕ್ಕರೆ ಕಾರ್ಖಾನೆಗಳಿಗೆ ಪೂರೈಸಲಾಗುತ್ತಿದೆ. ಕಾರ್ಖಾನೆಗಳ ಮೂಲಕ ರೈತರು ಪಡೆಯಬಹುದಾಗಿದೆ. ಬಿತ್ತನೆ ಕಬ್ಬಿಗೆ ಪ್ರತಿ ಟನ್‌ಗೆ ₹2700 ರಿಂದ ₹2900 ದರ ನಿಗದಿ ಪಡಿಸಲಾಗಿದೆ.

13-11-2021
Pv Pg 5C



The Bhyrachandra variety of jackfruit. (R) A new variety of sugarcane on display at Krishi Mela. This variety is best suited for the extraction of jaggery. DH PHOTOS/B K JANARDHAN

Scientists introduce new variety of red-petaled jackfruit

JAHNAVI R
BENGALURU, DHNS

With the rising demand for red-petaled jackfruit, scientists introduced the Bhyrachandra variety on Thursday during the annual Krishi Mela.

Bhyrachandra, which gets its name since the petal's colour resembles the full moon, bears fruits twice a year. Besides the regular April-May season, it delivers a second load of fruits in August-September.

An average fruit weighs 8.72 kilograms with 20-23 petals. A single tree can produce up to 120 trees, which might weigh about 1,200 kilograms.

"Yellow petal fruits are good, too," said Dr Shyamalamma S, professor, Department of Plant Biotechnology, University of Agricultural Sciences, GKVK.

"But the red petal ones like Tubugere and Sindhushankara varieties are more attractive to people. We are also creating more such varieties," Shyamalamma said.

Demand for tender fruits has been on the rise in the state, the professor noted.

"The tender fruits are cubed and sold in supermarkets. They are also used to make chips (vacuum fried and normal fried) and papad. The pulp of the ripe fruits is being used to make ice creams," she said, adding that the tender fruits are also exported to USA and Europe.

13-11-2021
Dec Hrd
Pg 03

ಮೂರು ತಿಂಗಳಲ್ಲೇ ತಯಾರಿಸಬಹುದು ಕಾಂಪೋಸ್ಟ್

ರೇಷ್ಮೆ ತ್ಯಾಜ್ಯದಿಂದ ಫಲವತ್ತಾದ ಗೊಬ್ಬರ

■ ಎಚ್.ಪಿ. ಪುಣ್ಯವತಿ ಬೆಂಗಳೂರು
punyavathi.hp@timesgroup.com

ರೇಷ್ಮೆ ಹುಳು ಸಾಕಾಣಿಕೆದಾರರು ರೇಷ್ಮೆ ಹುಳುವಿಗೆ ಬಳಸಿದ ಹಿಪ್ಪುನೇರಳೆ ಸೊಪ್ಪು ಹಾಗೂ ಅದರ ಇತರೆ ತ್ಯಾಜ್ಯ ಸಂಗ್ರಹಿಸಿಟ್ಟರೆ ಮೂರು ತಿಂಗಳಲ್ಲಿ ಫಲವತ್ತಾದ ಗೊಬ್ಬರ ಸಿದ್ಧಪಡಿಸ ಬಹುದು. ಕಾಂಪೋಸ್ಟ್ ಕಲ್ಚರ್/ವೇಸ್ಟ್ ಡಿಕಾಂಪೋಸ್ಟರ್ ಬಳಸಿ ರೇಷ್ಮೆ ತ್ಯಾಜ್ಯದಿಂದ ಗೊಬ್ಬರ ತಯಾರಿಕೆಯ ತಂತ್ರಜ್ಞಾನವನ್ನು ಕೃಷಿ ಮೇಳದಲ್ಲಿ ಪರಿಚಯಿಸಲಾಗಿದೆ.





ಡಾ. ಸವಿತಾ

ತ್ಯಾಜ್ಯವನ್ನು ತಿಪ್ಪೆಗೆ ಹಾಕಿದರೆ ಅದರ ಜತೆಗೆ ಇತರ ತ್ಯಾಜ್ಯ ಸೇರಿ ಕೊಳೆತು ಗೊಬ್ಬರವಾಗಲು ಕನಿಷ್ಠ ಒಂದು ವರ್ಷ ಬೇಕು. ಆದರೆ ಕೃಷಿ ಮೇಳ ದಲ್ಲಿ ಪರಿಚಯಿಸುವ ತಂತ್ರಜ್ಞಾನ ದಿಂದ ಕನಿಷ್ಠ ಅವಧಿಯಲ್ಲಿ ಗೊಬ್ಬರ ತಯಾರಿಸಬಹುದು.

ಸಿಮೆಂಟ್ ತೊಟ್ಟಿ ಇಲ್ಲವೇ ಬೃಹತ್ ಪಾಲಿಥಿನ್ ಬ್ಯಾಗ್‌ನಲ್ಲಿ ರೇಷ್ಮೆ ತ್ಯಾಜ್ಯ ಹಾಕಿ, ಅದಕ್ಕೆ ಸಗಣಿ ನೀರು ಸೇರಿಸಬೇಕು. ಇದಾದ ಬಳಿಕ ಕಾಂಪೋಸ್ಟ್ ಕಲ್ಚರ್ (ಗಮ್ ಮಾದರಿಯ ಇದು ಕೃಷಿ ವಿವಿಯಲ್ಲೇ ಲಭ್ಯ) ಅನ್ನು ತ್ಯಾಜ್ಯದೊಳಗೆ ಸುರಿದರಾಯಿತು. ತ್ಯಾಜ್ಯ ರಾಶಿಯ ಮೇಲ್ಭಾಗವನ್ನು ತೆಂಗಿನ ಗರಿಗಳಿಂದ ಮುಚ್ಚಿಡಬೇಕು. ವಾರಕ್ಕೆರಡು ಬಾರಿ ನೀರು ತ್ಯಾಜ್ಯಕ್ಕೆ ನೀರು ಚುಮುಕಿಸಬೇಕು. 15 ದಿನಕ್ಕೊಮ್ಮೆ ತ್ಯಾಜ್ಯ ತಿರುಗಿಸಿಕೊಡಬೇಕು. ಕೇವಲ ಎರಡೂವರೆಯಿಂದ ಮೂರು ತಿಂಗಳಲ್ಲಿ ಉದ್ಭುತ ಸಾವಯವ ಗೊಬ್ಬರ ಸಿದ್ಧಗೊಳ್ಳುತ್ತದೆ.

ಏನೆಲ್ಲಾ ತ್ಯಾಜ್ಯ: ಹಿಪ್ಪುನೇರಳೆ ಕಡ್ಡಿ, ರೇಷ್ಮೆಹುಳು ತಿಂದುಳಿದ ಸೊಪ್ಪು ಇತ್ಯಾದಿ ತ್ಯಾಜ್ಯ ಮತ್ತು ಹಿಕ್ಕೆಯನ್ನು ತ್ಯಾಜ್ಯಕ್ಕೆ ಬಳಸಬಹುದು. ಸುಮಾರು 12-15 ಟನ್‌ನಷ್ಟು ರೇಷ್ಮೆ ತ್ಯಾಜ್ಯದಿಂದ ಬರೋಬ್ಬರಿ 10 ಟನ್‌ನಷ್ಟು ಗೊಬ್ಬರ ಸಿಗುತ್ತದೆ. ಒಂದು ವರ್ಷದಿಂದ ಸಂಶೋಧನೆ ಮಾಡಿ ಈ ವಿಧಾನ ಪರಿಚಯಿಸಲಾಗಿದೆ ಎನ್ನುತ್ತಾರೆ ರಾಮನಗರದ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಡಾ. ಎಸ್. ಎಂ. ಸವಿತಾ.

ಒಂದು ವರ್ಷ ಹಸಿರಾಗಿರುವ ರಸಮೇವು

ಬೇಸಿಗೆಯಲ್ಲಿ ಜಾನುವಾರುಗಳಿಗೆ ಹಸಿ ಮೇವು ಸಿಗುವುದು ಕಷ್ಟ. ಈ ಸಮಸ್ಯೆ ನೀಗಿಸಲು ವಿನೂತನ ವಿಧಾನ ಪರಿಚಯಿಸಿದೆ.

ಹೌದು, ಚಳಿಗಾಲ ಇಲ್ಲವೇ ಮಳೆಗಾಲದಲ್ಲಿ ಬೆಳೆಸಿದ ಮೇವನ್ನು ಪಿಟ್, ಡ್ರಮ್ ಅಥವಾ ಬ್ಯಾಗ್‌ಗಳಲ್ಲಿ ತುಂಬಿಸಿ ಗಾಳಿ ಮತ್ತು ನೀರು ಹೋಗದಂತೆ ಭದ್ರವಾಗಿ ಮುಚ್ಚಿಡಬೇಕು. ಹೀಗೆ ಮಾಡಿಕೊಂಡ ಹಸಿರು ಮೇವು ಬಣ್ಣ ಬದಲಿಸಿರುತ್ತದೆ. ಆದರೆ ಒಳ್ಳೆಯ ಸುವಾಸನೆಯಿಂದ ಕೂಡಿದ್ದು, ರುಚಿಯೂ ಹೆಚ್ಚಾಗಿರುತ್ತದೆ. ಬೇಸಿಗೆ ಸಮಯದಲ್ಲಿ ಹಸಿರು ಮೇವಿನ ಅಭಾವ ಉಂಟಾದಾಗ ಇದನ್ನು ಬಳಸಬಹುದು. ರಸಮೇವಿಗೆ ಮುಸುಕಿನ ಜೋಳ, ಮೇವಿನ ಸಜ್ಜೆ, ಮೇವಿನ ಜೋಳ, ಹೈಬ್ರಿಡ್ ನೇಪಿಯರ್, ಕಬ್ಬಿನ ದಂಡಿ, ಗಿನಿ ಹುಲ್ಲು ಇತ್ಯಾದಿಗಳನ್ನು ಬಳಸಬಹುದು. ಒಂದು ಘನ ಮೀಟರ್ ಗುಂಡಿಯಲ್ಲಿ 500-600 ಕಿ.ಗ್ರಾಂ. ಮೇವು ತುಂಬಬಹುದು. ಸಂಗ್ರಹಿಸಿಟ್ಟುಕೊಂಡ ರಸಮೇವನ್ನು ಒಂದು ವಯಸ್ಕ ಹಸುವಿಗೆ ದಿನಕ್ಕೆ 20-25 ಕೆ.ಜಿ.ಯಷ್ಟನ್ನು ನೀಡಿದರೆ ಅದು ಹೆಚ್ಚು ಹಾಲು ಕೊಡುತ್ತದೆ. ಈ ವಿಧಾನ ಕೃಷಿ ಮೇಳದಲ್ಲಿ ರೈತರ ಗಮನ ಸೆಳೆಯುತ್ತಿದೆ.

13-11-2021 Pv Pg 5C

ಒಂದೇ ಎಲೆಯ ಗಿಡದ ಬೆಲೆ 50 ಸಾವಿರ

ಕೃಷಿ ಮೇಳಕ್ಕೆ ಬಂದಿದೆ ಒಂದೇ ಎಲೆಯ ಗಿಡ. ಇದರ ಬೆಲೆ ಬರೋಬ್ಬರಿ 50 ಸಾವಿರ ರೂ. ಒಂದೂವರೆ ಮೀಟರ್ ಉದ್ದದ ಹಚ್ಚಹಸುರಿನ ಎಲೆಯ 'ಲೀಫ್ ಆಂತೋರಿಯಂ' ಗಿಡ ಇದು. ತಿರುಮಲ ನರ್ಸರಿಯ ಜಿ. ನಾಗರಾಜು ಅವರು ಈ ವಿಶೇಷ ಗಿಡಗಳನ್ನು ಮಾರುತ್ತಿದ್ದಾರೆ. ಈ ಗಿಡವನ್ನು ಒಮ್ಮೆ ಖರೀದಿಸಿದರೆ ಸಾಕು ದೀರ್ಘ ಕಾಲದವರೆಗೆ ಜೀವಂತವಾಗಿರುತ್ತದೆ. ಇದರ ವಿಶೇಷವೆಂದರೆ ಹೆಚ್ಚು ಆಮ್ಲಜನಕ ನೀಡುತ್ತದೆ. ಬ್ರಿಟಿಷರ ಕಾಲದ ತಳಿಯಿದು. ಒಂದು ಗಿಡದಲ್ಲಿ ಗರಿಷ್ಠ 20 ಎಲೆಗಳು ಬರುತ್ತವೆ. ಅಷ್ಟು ಎಲೆಗಳು ಬರಲು ಬರೋಬ್ಬರಿ ಏಳು ವರ್ಷ ಬೇಕಾಗುತ್ತದೆ ಎನ್ನುತ್ತಾರೆ ನಾಗರಾಜು. ಮ್ಯಾಗ್ನಿಟೀಷಿಯಂ, ಕ್ರಿಸ್ಟೇಲಿಯಂ, ಕಿಂಗ್ ಹೀಗೆ ನಾನಾ ತಳಿಯ ಲೀಫ್ ಆಂತೋರಿಯ ಗಿಡಗಳು ತಿರುಮಲ ನರ್ಸರಿಯಲ್ಲಿದ್ದು, 2,500 ರೂ.ನಿಂದ ಒಂದು ಲಕ್ಷ ರೂ.ವರೆಗೆ ಬೆಲೆಯ ಗಿಡಗಳಿರುವುದು ವಿಶೇಷವಾಗಿದೆ.



ಉದ್ಯಮಿಯಾಗಿ ಬೆಳೆದ ಸಣ್ಣ ರೈತ

ಸಾಂಪ್ರದಾಯಿಕ ಮಾದರಿಯ ಗಾಣ ಆಳವಡಿಸಿ ತೆಂಗಿನ ಎಣ್ಣೆ ಉತ್ಪಾದಿಸುವ ರೈತರೊಬ್ಬರು ಉದ್ಯಮಿಯಾಗಿ ಬದಲಾಗಿದ್ದಾರೆ. ತುಮಕೂರು ಜಿಲ್ಲೆಯ ತುರುವೇಕೆರೆ ತಾಲೂಕಿನ ವಿಶ್ವನಾಥ್ ಯಶಸ್ವಿ ಉದ್ಯಮಿ. ಅವರು ಗಾಣದ ಮೂಲಕ ಶುದ್ಧ ತೆಂಗಿನ ಎಣ್ಣೆ ಉತ್ಪಾದಿಸಿ 'ಉನ್ನತಿ' ಎಂಬ ಹೆಸರಲ್ಲಿ ಮಾರುಕಟ್ಟೆಗೆ ಬಿಟ್ಟಿದ್ದಾರೆ. ವಿಶ್ವನಾಥ್ ಪ್ರಯತ್ನವನ್ನು ಪರಿಗಣಿಸಿದ ಕೃಷಿ ವಿವಿ ಅವರಿಗೆ ಗೌರವಿಸಿದೆ. ತೆಂಗಿನ ಎಣ್ಣೆನಾನಾ ರೀತಿಯಲ್ಲಿ ಮನುಷ್ಯನಿಗೆ ಆರೋಗ್ಯ ನೀಡುತ್ತದೆ ಎಂದು ಕೃಷಿ ವಿಶ್ವವಿದ್ಯಾಲಯದ ನಿವೃತ್ತ ಕುಲಪತಿ ಕೆ. ನಾರಾಯಣಗೌಡ ಹೇಳಿದ್ದಾರೆ.

ಗಮನ ಸೆಳೆದ ಬೈರಚಂದ್ರ ಹಲಸು

ಇದೀಗ ನವೆಂಬರ್ ಡಿಸೆಂಬರ್ ನಲ್ಲಿ ಹಲಸು ಸವಿಯಬಹುದು. ವರ್ಷದಲ್ಲಿ 2 ಬಾರಿ ಅಂದರೆ ಮಾರ್ಚ್ ಏಪ್ರಿಲ್‌ನಲ್ಲಿ ಬೆಳೆ ಹಾಗೂ ನವೆಂಬರ್ ಡಿಸೆಂಬರ್ ನಲ್ಲಿ ಕೊಯ್ಲಿಗೆ ಬರುವ ಬೈರಚಂದ್ರ ಎಂಬ ಹಲಸಿನ ತಳಿಯಿಂದ ಅದು ಸಾಧ್ಯ. ಈ ತಳಿಯನ್ನು ಕೃಷಿ ಮೇಳದಲ್ಲಿ ಪರಿಚಯಿಸಲಾಗಿದೆ. ಇದರ ಹಲಸಿನಲ್ಲಿ ಅಂಟಿನ ಸಮಸ್ಯೆಯೂ ಇರುವುದಿಲ್ಲ. ಪ್ರತಿ ಮರ ವರ್ಷಕ್ಕೆ 120 ರಿಂದ 150 ಹಣ್ಣುಗಳನ್ನು ಬಿಡುತ್ತದೆ.



ಗೋ ಮೂತ್ರದ ಕಳೆ ನಾಶಕ

ಕೃಷಿ ಕಳೆ ನಿವಾರಣೆಗೆ ರಾಸಾಯನಿಕ ಸಿಂಪಡಿಸಿ ಭೂಮಿಯ ಆರೋಗ್ಯ ಹಾಳು ಮಾಡಬಾರದು ಎಂಬ ಉದ್ದೇಶದಿಂದ ಖಾಸಗಿ ಸಂಸ್ಥೆಯೊಂದು ಗೋ ಮೂತ್ರ ಹಾಗೂ ಮತ್ತು ಗಿಡಮೂಲಿಕೆಗಳಿಂದ ನೈಸರ್ಗಿಕ ಕಳೆ ನಾಶಕ ಸಿದ್ಧಪಡಿಸಿದೆ. ಇದನ್ನು ಕಳೆಗಳಿಗೆ ಸಿಂಪಡಿಸಿದಾಗ ದ್ಯುತಿ ಸಂಶ್ಲೇಷಣೆ ಕ್ರಿಯೆ ನಿಂತು ನಿಧಾನವಾಗಿ ಕೊಳೆಯಲು ಆರಂಭವಾಗುತ್ತದೆ. ಗೋಮೂತ್ರ, ಗಿಡಮೂಲಿಕೆಗಳಿಂದ ಮಣ್ಣಿನ ಫಲವತ್ತತೆಯೂ ಹೆಚ್ಚುತ್ತದೆ.

ಅಡಿಕೆ, ತೆಂಗು ತ್ಯಾಜ್ಯ ಕತ್ತರಿಸುವ ಯಂತ್ರ

ದೊಡ್ಡ ದೊಡ್ಡ ತೆಂಗು/ಅಡಿಕೆ ಗರಿಗಳು, ಗಟ್ಟಿಯಾದ ತೆಂಗಿನ ಕಾಯಿ, ಚಿಪ್ಪು ಇತ್ಯಾದಿಗಳನ್ನು ಕ್ಷಣಮಾತ್ರದಲ್ಲಿ ಪುಡಿ ಮಾಡಿಕೊಡುವ ಯಂತ್ರ ಬಂದಿದೆ. ಹೌದು, ಜಯ ಟ್ರೇಡರ್ಸ್ ಗರಿ, ಎಲೆ, ಕಾಯಿ ಕತ್ತರಿಸುವ ಯಂತ್ರ (ಶ್ರೆಡರ್) ವನ್ನು ಕೃಷಿ ಮೇಳದಲ್ಲಿ ಪ್ರದರ್ಶಿಸುತ್ತಿದೆ. ಇದನ್ನು ಖರೀದಿಸುವ ರೈತರು ಇತರರಿಗೆ ಬಾಡಿಗೆಗೂ ಕೊಡಬಹುದು.

13-11-2021 Vk Pg 02

ಮಹತ್ವದ ಯೋಜನೆಗೆ ಕೇಂದ್ರ, ರಾಜ್ಯ ಸರಕಾರಗಳ ತಾತ್ಸಾರ

ಮಣ್ಣು ಪರೀಕ್ಷೆಯತ್ತ ನಿರ್ಲಕ್ಷ್ಯ

■ ಆತೀಶ್ ಬಿ.ಕನ್ನಾಳೆ ಶಿವಮೊಗ್ಗ
aatish.kannale@timesgroup.com

ಉತ್ತಮ ಫಸಲಿಗೆ ಮಣ್ಣಿನ ಆರೋಗ್ಯ ಅತ್ಯಗತ್ಯವಾಗಿದ್ದು, ಅದಕ್ಕೆ ಕೇಂದ್ರ ಮತ್ತು ರಾಜ್ಯ ಸರಕಾರಗಳು ನಿರೀಕ್ಷಿತ ಒತ್ತು ನೀಡುತ್ತಿಲ್ಲ.

2014-15ರ ಅವಧಿಯಲ್ಲಿ ರಾಜ್ಯಾದ್ಯಂತ ಭಾರಿ ಪ್ರಮಾಣದ ಮಣ್ಣು ಪರೀಕ್ಷೆ ಮಾಡಲಾಗಿದ್ದು, ಅದರ ಮೂಲಕ ರೈತರಿಗೆ ಮಣ್ಣು ಆರೋಗ್ಯ ಕಾರ್ಡ್ (ಸಾಯಿಲ್ ಹೆಲ್ತ್ ಕಾರ್ಡ್) ನೀಡಲಾಗಿತ್ತು. ಆದರೆ, ಕೇಂದ್ರ ಸರಕಾರದ ಸಾಯಿಲ್ ಹೆಲ್ತ್ ಮಿಷನ್ ಯೋಜನೆ ಮುಗಿದ ನಂತರ ಮಣ್ಣಿನ ಫಲವತ್ತತೆ ಪರೀಕ್ಷೆಗೆ ಹೊಸ ಯೋಜನೆ ನೀಡಿಲ್ಲ. ಇದರಿಂದಾಗಿ, ಮಣ್ಣುಪರೀಕ್ಷಾ ಪ್ರಮಾಣದಲ್ಲಿ ಇಳಿಕೆಯಾಗಿದೆ.

ಸಾಯಿಲ್ ಹೆಲ್ತ್ ಮಿಷನ್ ಅಡಿ ಲಕ್ಷಾಂತರ ಮಣ್ಣಿನ ಮಾದರಿಗಳನ್ನು ಸಂಗ್ರಹಿಸಿ ಪರೀಕ್ಷೆಗೆ ಒಳಪಡಿಸಲಾಗುತ್ತಿತ್ತು. ಫಲವತ್ತತೆಯ ಬಗ್ಗೆ ಯಾವುದೇ ಸಮಸ್ಯೆಗಳಿದ್ದರೂ ತಕ್ಷಣ ಅದಕ್ಕೆ ಪರಿಹಾರ ಕಂಡುಕೊಳ್ಳುವುದಕ್ಕೆ ಒತ್ತು ನೀಡಲಾಗುತ್ತಿತ್ತು. ಆದರೆ, 2018-19ರಿಂದ ಈಚೆಗೆ ಸರಕಾರ ನೀಡುತ್ತಿರುವ ಗುರಿಯ ಪ್ರಮಾಣದಲ್ಲಿ ಇಳಿಕೆಯಾಗಿದ್ದು, ರೈತರು ತಾವಾಗೇ ಬಂದರಷ್ಟೇ ಮಣ್ಣಿನ ಫಲವತ್ತತೆಯನ್ನು ಪರೀಕ್ಷೆಗೆ ಒಳಪಡಿಸಲಾಗುತ್ತಿದೆ.

ತಜ್ಞರ ಪ್ರಕಾರ, ಪ್ರತಿ ಮೂರು ವರ್ಷಗಳಿಗೊಮ್ಮೆ ಮಣ್ಣಿನ ಫಲವತ್ತತೆಯಲ್ಲಿ ಬದಲಾವಣೆಯಾಗುತ್ತದೆ. ಆದರೆ, ಬದಲಾದ ಹವಾಮಾನದಿಂದಾಗಿ ಎರಡು ವರ್ಷಕ್ಕೊಮ್ಮೆ ಫಲವತ್ತತೆ ಪರೀಕ್ಷೆ ಅಗತ್ಯ. ಜತೆಗೆ, ರೈತರು ಬೆಳೆಗಾಗಿ ಬಳಸುವ ರಾಸಾಯನಿಕದ ಮೇಲೆಯೂ ಅದರ ಗುಣಮಟ್ಟ ನಿರ್ಧಾರವಾಗುತ್ತದೆ. 2021-22ಕ್ಕೆ ಮಣ್ಣು ಪರೀಕ್ಷೆ ನಡೆಸಿ ಮೂರು ವರ್ಷವಾಗಲಿದ್ದು, ಮಣ್ಣು ತನ್ನ ಫಲವತ್ತತೆಯನ್ನು ಸಾಕಷ್ಟು ಬದಲಿಸಿಕೊಂಡಿರುತ್ತದೆ. ಅದಕ್ಕೆ ಅಗತ್ಯವಿರುವ ಪೌಷ್ಟಿಕಾಂಶದ ಬಗ್ಗೆ ಸರಿಯಾದ ಮಾಹಿತಿ ನೀಡಬೇಕಾದರೆ, ಮಣ್ಣು ಪರೀಕ್ಷೆ ಅಗತ್ಯ. ಆದರೆ, 2021-22ಕ್ಕೆ ಮಣ್ಣುಪರೀಕ್ಷೆಗೆ ತೀರಾ ಕಡಿಮೆ ಗುರಿ ನೀಡಲಾಗಿದೆ.



ಶಿವಮೊಗ್ಗದಲ್ಲಿ ಸ್ಟಾಪ್ ಕಟ್

2018ರಿಂದ ಈಚೆಗೆ ಮಣ್ಣುಪರೀಕ್ಷೆ ಪ್ರಮಾಣ ಇಳಿಕೆಯಾಗಿದ್ದರಿಂದ ಜಿಲ್ಲಾಮಣ್ಣುಆರೋಗ್ಯ ಕೇಂದ್ರದಲ್ಲಿಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದ ನೌಕರರ ಸಂಖ್ಯೆಯನ್ನು ಕಡಿತ ಗೊಳಿಸಲಾಗಿದೆ. ಈ ಮುಂಚೆ 6 ವಿಜ್ಞೇಷಕರು, 4 ಸಹಾಯಕರು, 4 ಪರಿಚಾರಕರು ಹಾಗೂ 4 ಡಿ ಗ್ರೂಪ್ ಸೇರಿ ಒಟ್ಟು 15 ಜನ ಕಾರ್ಯನಿರ್ವಹಿಸುತ್ತಿದ್ದರು. ಈಗ ಸಂಖ್ಯೆ ಆರಕ್ಕೆ ಇಳಿಕೆಯಾಗಿದೆ.

ಬದಲಾದ ಹವಾಮಾನ ಪರಿಸ್ಥಿತಿಯಲ್ಲಿ ಮಣ್ಣಿನ ಗುಣ ಧರ್ಮಗಳು ಪರಿವರ್ತನೆಗೊಳ್ಳುವುದರಿಂದ ಹಾಗೂ ರಸಗೊಬ್ಬರಗಳ ಅಸಮರ್ಪಕ ಬಳಕೆಯಿಂದ ಮಣ್ಣಿನ ಆರೋಗ್ಯದಲ್ಲಿ ವ್ಯತ್ಯಾಸವಾಗಿದೆ. ಇದು ಬೆಳೆಗಳ ಬೆಳವಣಿಗೆ ಮತ್ತು ಇಳುವರಿಯ ಮೇಲೆ ಪರಿಣಾಮ ಬೀರುತ್ತಿದೆ. ಆದ್ದರಿಂದ, ಹೆಚ್ಚಿನ ರೈತರು ಸ್ವಯಂ ಪ್ರೇರಿತವಾಗಿ ತಮ್ಮ ಕ್ಷೇತ್ರಗಳ ಮಣ್ಣಿನ ಆರೋಗ್ಯವನ್ನು ಪರೀಕ್ಷಿಸಿಕೊಂಡು ಸಮರ್ಪಕವಾಗಿ ರಸಗೊಬ್ಬರಗಳನ್ನು ಬಳಸಿ ಸುಸ್ಥಿರ ಕೃಷಿಯನ್ನು ಕೈಗೊಳ್ಳಬೇಕಿದೆ.

- ಡಾ.ಬಿ.ಸಿ.ಧನಂಜಯ್
ಸಹ ಪ್ರಾಧ್ಯಾಪಕರು, ಕೃಷಿ ಮತ್ತು ತೋಟಗಾರಿಕೆ ವಿವಿ, ಶಿವಮೊಗ್ಗ

ಶಿವಮೊಗ್ಗ ಜಿಲ್ಲೆಯಲ್ಲಿ ಅಗತ್ಯಕ್ಕೆ ಅನುಗುಣವಾಗಿ ಮಣ್ಣಿನ ಮಾದರಿಗಳನ್ನು ಪರೀಕ್ಷಿಸಲಾಗುತ್ತಿದೆ. ರೈತರು ಖುದ್ದಾಗಿ ಮಾದರಿ ನೀಡಿದರೆ ಅದನ್ನು ಪರೀಕ್ಷಿಸಲಾಗುವುದು.

- ಡಾ.ಕಿರಣ್
ಜಂಟಿ ಕೃಷಿ ನಿರ್ದೇಶಕರು, ಶಿವಮೊಗ್ಗ

13-11-2021 Vk Pg 09

ಕೃಷಿಮೇಳದಲ್ಲಿ ಗಮನ ಸೆಳೆದ ಆಫ್ರಿಕಾದ ಡಾಪರರ್ ಕುರಿ

ನ ವಿಶ್ವವಾಣಿ ಸುದ್ದಿಮನೆ ಯಲಹಂಕ

ದಕ್ಷಿಣ ಆಫ್ರಿಕಾ ತಳಿಯ ಡಾಪರರ್ ಕುರಿ ಕೃಷಿಮೇಳದಲ್ಲಿ ಜನರ ತಮ್ಮತ್ತ ಸೆಳೆಯುತ್ತಿವೆ. ಉತ್ಕೃಷ್ಟ ತಳಿಯ ಕುರಿಯಾಗಿರುವ ಡಾಪರರ್ ಎರಡು ಗುಣ ವಿಶೇಷಣ ಗಣನ್ನು ಹೊಂದಿದ್ದು, ಕಪ್ಪು ಮತ್ತು ಬಿಳಿಯ ವರ್ಣಗಳಲ್ಲಿ ಲಭ್ಯವಿದೆ. 1930ರಲ್ಲಿ ಡಾರ್ಸಟ್ ಹಾರ್ನ್ ಮತ್ತು ಕಪ್ಪು ತಲೆ ಪರ್ಶಿಯನ್ ಕುರಿಗಳ ಸಂಯೋಗದಿಂದ ಈ ಕುರಿಯನ್ನು ಅಭಿವೃದ್ಧಿ ಪಡಿಸಿದ್ದಾರೆ.



ಡಾಪರರ್ ಕುರಿ ಹಲವು ವಿಶೇಷತೆಗಳಿಂದ ಕೂಡಿದ್ದು, ಈ ಕುರಿಗಳಿಗೆ ಕೊಂಬುಗಳಿರುವುದಿಲ್ಲ. ಉದ್ದನೆ ದೇಹದೊಂದಿಗೆ ಕಡಿಮೆ ಕೂದಲುಗಳನ್ನು ಹೊಂದಿರುವ ಡಾಪರರ್ ಕುರಿ, ಕೆಲ ದಿನಗಳ ನಂತರ ಕೂದಲು ಉದುರುವ ಲಕ್ಷಣ ಹೊಂದಿರುತ್ತದೆ. ಇದು ಮಾಂಸದ ತಳಿಯಾಗಿದ್ದು, ಶೀಘ್ರ ದೇಹದ ತೂಕ ಹೆಚ್ಚಿಸಿಕೊಳ್ಳುತ್ತದೆ. 3-4 ತಿಂಗಳಲ್ಲಿ ದೇಹದ ತೂಕ 30ರಿಂದ 40 ಕೆ.ಜಿ.ಗಳಷ್ಟು ಹೆಚ್ಚಿಸಿಕೊಳ್ಳುತ್ತದೆ.



ಡಾಪರರ್ ಕುರಿಯ ಮಾಂಸ ಬಹಳ ಕಡಿಮೆ ಕೊಬ್ಬನ್ನು ಹೊಂದಿರುವುದರಿಂದ ಸೇವನೆಗೆ ಆರೋಗ್ಯಕರ. ಇದರ ಮಾಂಸ ಹೆಚ್ಚು ಮೃದುವಾಗಿರುವ ಕಾರಣ ಖಾಧ್ಯ ತಯಾರಿಸಲು ತುಂಬಾ ಕಡಿಮೆ ಸಮಯ ತೆಗೆದುಕೊಳ್ಳುತ್ತದೆ. ಡಾಪರರ್ ಕುರಿ ಎಲ್ಲ ರೀತಿಯ ವಾತಾವರಣಕ್ಕೆ ಹೊಂದಿಕೊಂಡು ಬೆಳೆಯುವ ರೈತ ಸ್ನೇಹಿ ಕುರಿ ತಳಿಯಾಗಿದೆ. ಹುಟ್ಟಿದ ಕುರಿಯೇ 4ರಿಂದ 6 ಕೆ.ಜಿ. ತೂಕವಿದ್ದು, ಕೇವಲ ಒಂದೇ ವರ್ಷದಲ್ಲಿ ಹೆಣ್ಣು ಕುರಿ 80ರಿಂದ 85 ಕೆ.ಜಿ. ತೂಕ ಹೊಂದುತ್ತದೆ, ಗಂಡು ಕುರಿ 105ರಿಂದ 110 ಕೆ.ಜಿ. ತೂಕ ಹೊಂದುತ್ತದೆ, ಈ ಕಾರಣದಿಂದಾಗಿ ಸಾಕಾಣಿಕೆ ದಾರರಿಗೆ ಹೆಚ್ಚು ಲಾಭದಾಯಕ ಎನಿಸಿದೆ.

ನಾಟಿ ಕುರಿಗಳ ಜತೆ ಸಂಯೋಜನೆ: ಡಾಪರರ್ ಕುರಿ ತಳಿಯ ಕುರಿಯನ್ನು ಸ್ಥಳೀಯ ನಾಟಿ ಕುರಿಗಳಾದ ಡೆಕ್ಕನ್, ಯಲಗ, ಮೇಚೇರಿ, ರಾಮುಲ್‌ಬೆಲೆಟ್ ಕುರಿಗಳಿಗೆ ಸಂಯೋಜಿಸಿ ಅಭಿವೃದ್ಧಿ ಪಡಿಸಿದರೆ



ಅಭಿವೃದ್ಧಿ ಹೊಂದಿದ ಕುರಿ ಒಂದು ವರ್ಷದಲ್ಲಿ 50ರಿಂದ 70 ಕೆ.ಜಿ.ದೇಹದ ತೂಕವನ್ನು ಹೊಂದುತ್ತದೆ. ಪ್ರತಿ ಕೆ.ಜಿ. ಮಾಂಸ 2000ರಿಂದ 2500 ರು.ಗಳದ್ದು, ಈ ಕುರಿ 3 ಲಕ್ಷ ರು.ಗಳ ವರೆಗೆ ಮಾರಾಟ ವಾಗುತ್ತದೆ. 70ರಿಂದ 80 ಕೆ.ಜಿ.ತೂಕದ ಡಾಪರರ್ ಮೂಲ ತಳಿಯ ಒಂದು ಕುರಿ ಸುಮಾರು 5 ಲಕ್ಷ ರುಗಳಷ್ಟು ಬೆಲೆ ಬಾಳುತ್ತದೆ. 100ರಿಂದ 110 ಕೆ.ಜಿ. ತೂಕ ಹೊಂದಿರುವ ಡಾಪರರ್ ಮೂಲ ತಳಿಯ ಒಂದು ಕುರಿ 7 ಲಕ್ಷ ರು.ಗಳ ವರೆಗೆ ಮಾರಾಟವಾಗುವ ಅವಕಾಶಗಳಿರುತ್ತದೆ. ಈ ಕಾರಣದಿಂದಾಗಿ ಡಾಪರರ್ ಕುರಿ ಇತ್ತೀಚಿನ ದಿನಗಳಲ್ಲಿ ಅತ್ಯಂತ ಜನಪ್ರಿಯವಾಗುತ್ತಿರುವ ಕುರಿ ತಳಿಯಾಗಿದ್ದು, ಸಾಕಾಣಿಕೆಗೆ ಯೋಗ್ಯವಾಗಿದೆ.

ಬಾಗಲೂರು ಸಮೀಪದ ಮಾರೇನಹಳ್ಳಿಯ ಸಿಚಿನ ಕುರಿ ಫಾರಂನಲ್ಲಿ ಸುಮಾರು 40ಕ್ಕೂ ಹೆಚ್ಚು ಡಾಪರರ್ ಮೂಲ ತಳಿ ಕುರಿಗಳಿದ್ದು, ಡಾಪರರ್ ಮತ್ತು ಸ್ಥಳಿಯ ನಾಟಿ ಕುರಿಗಳ ಸಂಯೋಗದಿಂದ ಅಭಿವೃದ್ಧಿ ಪಡಿಸಿರುವ ಸುಮಾರು 150ಕ್ಕೂ ಹೆಚ್ಚು ಕುರಿಗಳಿವೆ. ಉಳಿದಂತೆ ಸ್ಥಳಿಯ ನಾಟಿ ಕುರಿಗಳಾದ ಡೆಕ್ಕನ್, ಯಲಗ, ಮೇಚೇರಿ, ರಾಮ್ಬುಲೆಟ್ ತಳಿಯ ಸುಮಾರು 800ಕ್ಕೂ ಹೆಚ್ಚು ಕುರಿಗಳು ಮತ್ತು ಸುಮಾರು 200 ಮೇಕೆಗಳಿವೆ. ಈ ಫಾರಂನಲ್ಲಿ ಡಾಪರರ್ ಮತ್ತು ಸ್ಥಳಿಯ ನಾಟಿ ತಳಿ ಕುರಿಗಳ ಸಂಯೋಜನೆಯಿಂದ ಅಭಿವೃದ್ಧಿ ಪಡಿಸಿದ ಕುರಿಗಳನ್ನು ಪೋಷಣೆ ಮತ್ತು ಮಾರಾಟ ಮಾಡಲಾಗುತ್ತಿದೆ.

ಮೀನಿನ ತ್ಯಾಜ್ಯವೇ ಸಸ್ಯಗಳಿಗೆ ಆಹಾರ

ಯಲಹಂಕ: ಕೋಳಿ ಹಾಕಿದ ಹಿಕ್ಕೆ ಮೀನಿಗೆ ಆಹಾರವಾಗುತ್ತದೆ. ಹಾಗೆಯೇ ಮೀನಿನ ತ್ಯಾಜ್ಯ ಸಸ್ಯಗಳಿಗೆ ಆಹಾರವಾಗುತ್ತೆ. ಹೀಗೆ ಕಡಿಮೆ ಖರ್ಚಿನಿಂದ ಅಧಿಕ ಲಾಭಗಳಿಸುವ 'ಮೈಕ್ರೋ ಪೌನಿಕ್ಸ್' ಕೃಷಿ ಮೇಳದಲ್ಲಿ ಎಲ್ಲರ ಗಮನ ಸೆಳೆಯುತ್ತಿದೆ. ನೀರಿನ ಟ್ಯಾಂಕ್‌ನಲ್ಲಿ ಮೀನುಗಳು ಆದರ ಮೇಲೆ ಕೋಳಿ ಮತ್ತು ಮೊಲ ಇವುಗಳ ಹಿಕ್ಕೆ ನೇರವಾಗಿ ನೀರಿಗೆ ಸೇರಿ, ಪೋಷಕಾಂಶಗಳನ್ನ ಒಳಗೊಂಡ ನೀರು ನೇರವಾಗಿ ಸಸ್ಯಗಳಿಗೆ ಆಹಾರವಾಗುವುದು ಮೈಕ್ರೋ ಪೌನಿಕ್ಸ್ ಪದ್ಧತಿ ವಿಶೇಷತೆ. ಕೋಳಿಗೆ ಆಹಾರ ಹಾಕಿದ ನಂತರ ಆದರ ತ್ಯಾಜ್ಯ ನೀರಿಗೆ ಸೇರುತ್ತದೆ. ಆ ಬಳಿಕ ಝೂ ಪ್ಲ್ಯಾಂಕ್ಟನ್ ಗಳು ಮತ್ತು ಫೈಟೋ ಪ್ಲಾಂಕ್ಟನ್ ಗಳಾಗಿ ಬದಲಾಗುವುದರೊಂದಿಗೆ ಮೀನಿಗೆ ಆಹಾರವಾಗುತ್ತದೆ. ನಂತರ ಕೋಳಿ ತ್ಯಾಜ್ಯದಿಂದ ಬರುವ ಅಮೋನಿಯ ಮತ್ತು ಮೀನಿನ ಘನ ತ್ಯಾಜ್ಯವನ್ನ ನೈಟ್ರಿಫಿಕೇಷನ್ ಮತ್ತು ಖನಿಜೀಕರಣವನ್ನ ಯಾಂತ್ರಿಕ ಮತ್ತು ಜೈವಿಕ ವಿಧಾನದಿಂದ ಮಾಡಲಾಗುತ್ತದೆ. ಇದರಿಂದ ಬರುವ ಪೋಷಕಾಂಶಗಳು ಸಸ್ಯಗಳಿಗೆ ಆಹಾರವಾಗುತ್ತದೆ. ಒಂದು ಕೋಳಿಗೆ 8 ಮೀನು, 8 ಮೀನಿಗೆ 21 ಸಸ್ಯಗಳನ್ನ ಬೆಳೆಸಬಹುದು. ಕೋಳಿ ಬದಲಿಗೆ ಮೊಲ ಮತ್ತು ಕ್ವೆಲ್‌ಗಳನ್ನ ಸಾಕಬಹುದು. ಸುಮಾರು 90 ಸಾವಿರದಲ್ಲಿ ಒಂದು ಮೈಕ್ರೋ ಪೌನಿಕ್ಸ್ ಘಟಕ ತಯಾರಿಸಬಹುದು.

13-11-2021 Vsv Pg 12

13-11-2021 Uv Pg 02

ಯುವಕರಲ್ಲಿ ಕುತೂಹಲ ಹೆಚ್ಚಿಸಿದ ಸುಲಭ ಕೃಷಿ

ನಾಲ್ಕು ದಿನಗಳ ಕೃಷಿ ಮೇಳದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಯುವಕರೇ ಭೇಟಿ

ಬೆಂಗಳೂರು: ಕೊರೋನಾ ನಂತರದ ಕಾಲಘಟ್ಟದಲ್ಲಿ ನಗರ ಜೀವನಕ್ಕೆ ಗುಡ್ ಬೈ ಹೇಳಿ ಹಳ್ಳಿಗಳತ್ತ ಸಾಗಿರುವ ಯುವಕರು ಕೃಷಿಯತ್ತ ಒಲವು ತೋರಿದ್ದಾರೆ. ಸುಲಭವಾಗಿ ಕೃಷಿ ಮಾಡಲು ಸಿಗಬಹುದಾದ ಯಂತ್ರೋಪಕರಣಗಳಿಗೆ ಹುಡುಕಾಟದಲ್ಲಿರುವುದು ಕಂಡುಬಂದಿದೆ.

ಜಕ್ಕರಿಕೆಯಲ್ಲಿ ನಡೆಯುತ್ತಿರುವ ನಾಲ್ಕು ದಿನಗಳ ಕೃಷಿ ಮೇಳದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಯುವಕರೇ ಭೇಟಿ ನೀಡುತ್ತಿದ್ದು ಆಧುನಿಕ ಕೃಷಿ ಯಂತ್ರೋಪಕರಣಗಳ ಬಗ್ಗೆ ನೂತನ ಕೃಷಿ ಪದ್ಧತಿ, ಉತ್ತಮ ಇಳುವರಿ ನೀಡಬಹುದಾದ ಬೆಳೆಗಳು, ವಾಣಿಜ್ಯ ಬೆಳೆಗಳು ಮತ್ತು ಸಣ್ಣ ರೈತರಾಗಿ ಬಂದರೆಯ ಎಕರೆ ಪ್ರದೇಶಗಳಲ್ಲಿ ಬೆಳೆಯ ಬಹುದಾದ ಮತ್ತು ಉತ್ತಮ ಆದಾಯ ಬರುವಂತಹ ಬೆಳೆಗಳತ್ತ ಯುವಕರು ನೋಟ ಹರಿಸಿದ್ದರು.

ಇತ್ತೀಚಿನ ದಿನಗಳಲ್ಲಿ ಕೃಷಿ ಕಾರ್ಮಿಕರ ಸಂಖ್ಯೆ ಇಳಿಮುಖವಾಗುತ್ತಿದೆ. ಆದರೆ ಜೊತೆಗೆ ಕೃಷಿ ಕಾರ್ಮಿಕರ ಕೂಲಿ ಕೂಡ ಹೆಚ್ಚುತ್ತಾವಾಗುತ್ತಿದೆ. ಇದರಿಂದ ಸಣ್ಣ ರೈತರು, ವ್ಯವಸಾಯಕ್ಕೆ ಹೂಡಿರುವ ಹಣದ ಜೊತೆಗೆ ಲಾಭ ಕಡಿಮೆಯಾಗುತ್ತಿದೆ. ಹೀಗಾಗಿ, ಕೃಷಿ ಯಂತ್ರೋಪಕರಣಗಳನ್ನು ಬಳಸಿ ಸುಲಭವಾಗಿ ಕೃಷಿ ಮಾಡಬಹುದಾದ ಯಂತ್ರಗಳ ಮಾಹಿತಿಯನ್ನು ಯುವಕರು ಕೇಳ ಪಡೆಯುತ್ತಿದ್ದರು.

ಯಾವ ಬೆಳೆಗಳಿಗೆ ಆದ್ಯತೆ?: ತೋಟಗಾರಿಕಾ ಬೆಳೆಗಳಾದ ಟೊಮ್ಯಾಟೋ, ದಪ್ಪ ಮೆಣಸಿನಕಾಯಿ, ಹಸಿರು ಮೆಣಸಿನಕಾಯಿ, ಹುರುಳಿಕಾಯಿ, ಬದನೆಕಾಯಿ, ಕ್ಯಾರೆಟ್, ಆಹಾರ ಬೆಳೆಗಳಾದ ರಾಗಿ, ಭತ್ತ, ಕಡಿಮೆ ನೀರಿನಲ್ಲಿ ಮತ್ತು ಮಿಶ್ರ ಜಮೀನುಗಳಲ್ಲಿ ಬೆಳೆಯಬಹುದಾದ ಸಿರಿಧಾನ್ಯಗಳಾದ ಸಾಮೆ, ಆರ್ಕ, ನವಣೆ, ಬರಗು, ಎಳ್ಳಿಕಾಳುಗಳು ಮತ್ತು ಫ್ರಾಸ್ಟ್‌ಫುಡ್‌ಗಳಿಗೆ ಬೇಕಾಗಬಹುದಾದ ವಿದೇಶಿ ತರಕಾರಿಗಳನ್ನು



ಬೆಳೆಯಲು ಯುವ ರೈತರು ಆಸಕ್ತಿ ತೋರುತ್ತಿದ್ದಾರೆ.

ಇದಕ್ಕಾಗಿ ಕಳೆ ತೆಗೆಯುವುದು, ಬದು ನಿರ್ಮಾಣ, ಗುಳಿ ತೋಡುವುದು, ಉಳುಮೆ ಮಾಡುವುದು, ಕೀಟನಾಶಕ ಸಿಂಪಡಣೆ ಮತ್ತು ಕೊಯ್ಲು ಕೆಲಸವನ್ನು ಸುಲಭಗೊಳಿಸುವ ಯಂತ್ರಗಳಿಗೆ ಹೆಚ್ಚಿನ ಜನರು ಆಸ್ಥಿಯಿಂದ ನೋಡುತ್ತಿದ್ದರು.

ಈ ಕುರಿತು ಮಾತನಾಡಿದ ಮೈಸೂರಿನ ರೈತ ಮಹದೇವಪ್ಪ ಇನ್ನೇ ಮಾದರಿ ಕೃಷಿಯಿಂದ ನೀರಿನ ಬಳಕೆ ಮತ್ತು ಕೃಷಿ ಕಾರ್ಮಿಕರ ಬಳಕೆ ಎರಡೂ ಕೂಡ ಕಡಿಮೆಯಾಗುತ್ತದೆ. ಯಂತ್ರೋಪಕರಣಗಳನ್ನು ಬಳಸಿಕೊಳ್ಳುವ ಜೊತೆಗೆ ಆಧುನಿಕ ತಂತ್ರಜ್ಞಾನ ಗಳನ್ನು ಅಳವಡಿಸಿಕೊಂಡರೆ, ಹೆಚ್ಚಿನ ಪ್ರಮಾಣದಲ್ಲಿ ಇಳುವರಿ ತೆಗೆಯಲು ಸಾಧ್ಯವಾಗುತ್ತದೆ. ಅದಕ್ಕಾಗಿ ಬೇಕಾಗುವ ಸಲಕರಣೆಗಳನ್ನು ನೋಡುತ್ತಿದ್ದೇನೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಸಾಮಾನ್ಯವಾಗಿ ಮಂಡ್ಯ, ಮೈಸೂರು, ಚಾಮರಾಜನಗರದಲ್ಲಿ ದೇಸಿ ಬೆಳೆಗಳಾದ ಕಬ್ಬು ಭತ್ತ, ರಾಗಿಯನ್ನೇ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಿದ್ದಾರೆ. ಇದರ ಬದಲಾಗಿ ರೈತರಿಗೆ ಆದಾಯವನ್ನು ತರುವಂತಹ ಬೆಳೆಗಳನ್ನು ಬೆಳೆಯಲು ಆಸಕ್ತರಾಗಿದ್ದೇನೆ. ಹೀಗಾಗಿ, ಕೃಷಿಮೇಳದಲ್ಲಿ ಏನಾದರೂ ಆನುಕೂಲವಾಗಬಹುದು ಎಂಬ ಉದ್ದೇಶದಿಂದ ಬಂದಿದ್ದೇನೆ ಎಂದು ತಿಳಿಸಿದರು.

ಕೋಲಾರದಿಂದ ಬಂದಿದ್ದ ಸತೀಶ್ ಮಾತನಾಡಿ, ಜಲ್ಲೆಯಲ್ಲಿ ಈಗಾಗಲೇ ತರಕಾರಿ- ಹೂಗಳನ್ನು ಬೆಳೆಯಲಾಗುತ್ತಿದೆ. ಜಲ್ಲೆಯಲ್ಲಿ ನೀರಿನ ಆಭಾವ ಇರುವುದರಿಂದ ಕಡಿಮೆ ನೀರು ಬಳಸಿಕೊಂಡು ಬೆಳೆಯಬಹುದಾದ ಆಧುನಿಕ ತಂತ್ರಜ್ಞಾನಗಳನ್ನು ತಿಳಿದುಕೊಳ್ಳಲು ಬಂದಿದ್ದೇನೆ ಎಂದು ಹೇಳಿದರು.

ಸಿಲಿಕಾನ್ ಸಿಟಿಯಲ್ಲಿ ಫಾಸ್ಟ್ ಫುಡ್ ಗಳಿಗೆ ತುಂಬಾನೇ ಬೇಡಿಕೆ ಇದೆ. ಪಿಜ್ಜಾ, ಬರ್ಗರ್ ಸೇರಿದಂತೆ ಇನ್ನಿತರ ಫಾಸ್ಟ್ ಫುಡ್‌ಗಳಿಗೆ ಬೇಕಾಗುವ ಸೊಪ್ಪು-ತರಕಾರಿ ಬೆಳೆಯಲು ಕೃಷಿ ಇಲಾಖೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು.

• **ಸಿದ್ಧಲಿಂಗಪ್ಪ** ತುಮಕೂರು

ಸಿರಿಧಾನ್ಯಗಳನ್ನು ಒಕ್ಕಣೆ ಮಾಡಲು ಮತ್ತು ಸ್ವಚ್ಛಗೊಳಿಸಲು ಬೇಕಾಗುವ ಸಲಕರಣೆಗಳನ್ನು ಒದಗಿಸುವ ಬಗ್ಗೆ ಸರ್ಕಾರ ಮತ್ತು ಕಾಳಿಜೆ ವಹಿಸಬೇಕು. ನಗರದ ಜನತೆ ಸಿರಿಧಾನ್ಯಗಳನ್ನು ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬಳಕುತ್ತಿದ್ದಾರೆ. ಬೇಡಿಕೆ ಕಡಿಮೆ ಇರುವುದರಿಂದ ಸಿರಿಧಾನ್ಯಗಳಿಗೆ ಹೆಚ್ಚಿನ ಬೆಲೆ ಇದೆ. ದೊಡ್ಡ ಮಟ್ಟದಲ್ಲಿ ಬೆಳೆದರೆ, ಎಲ್ಲರೂ ಸಿರಿಧಾನ್ಯ ಬಳಸಲು ಸಹಕಾರಿಯಾಗಲಿದೆ.

• **ತಿಪ್ಪೇಸ್ವಾಮಿ,** ಚಿತ್ರದುರ್ಗ

1.76 ಲಕ್ಷ ಜನರು ಭೇಟಿ, ಆನ್‌ಲೈನ್‌ನಲ್ಲಿ 5.2 ಲಕ್ಷ ಹಾಜರ್

ಮೇಳಿಯ ನಡುಬೆಯೂಂ ಕುಕ್ಕಶಾರದಕೃಷಿ ಮೇಳಕ್ಕೆ ಬೆಂಗಳೂರಿನ ಸ್ಥಂದನೆ ದೊರಕಿದ್ದು, ಭೌತಿಕವಾಗಿ 1.76 ಲಕ್ಷ ಹಾಗೂ ವರ್ಚುಯಲ್ ವೇದಿಕೆಯಲ್ಲಿ 5.2 ಲಕ್ಷ ಜನರು ಭೇಟಿ ನೀಡಿದ್ದರು.

ರಾಜ್ಯದ ಹಲವೆಡೆಯಿಂದ ಕೃಷಿ ಮೇಳಕ್ಕೆ ಬಾರಲು ಸಾಧ್ಯವಾಗದವರಿಗಾಗಿ ಆನ್‌ಲೈನ್ ವ್ಯವಸ್ಥೆಮಾಡಲಾಗಿದ್ದು, ಹೆಚ್ಚಿನ ಜನರು ಆನ್‌ಲೈನ್‌ನಲ್ಲಿಯೇ ಹಾಜರಾಗಿ ಮಾಹಿತಿ ಪಡೆದುಕೊಳ್ಳುತ್ತಿದ್ದಾರೆ.

ಕೃಷಿ ಮೇಳದ ಮೊದಲ ದಿನ ಮಳೆಯದ್ದರಿಂದ ಕಾರಣ 50 ಸಾವಿರಕ್ಕೂ ಹೆಚ್ಚಿನ ಜನ ಭೌತಿಕವಾಗಿ ಮತ್ತು 1.55 ಲಕ್ಷ ಜನರು ಆನ್‌ಲೈನ್‌ನಲ್ಲಿ ಪಾಲ್ಗೊಂಡಿದ್ದರು. ಶುಕ್ರವಾರ ಕೂಡ ಸೋನೆ ಮಳೆಯದ್ದರೂ ಆದನ್ನು ಲೆಕ್ಕಿಸದೆ ಮೇಳಕ್ಕೆ ಭೇಟಿ ನೀಡಿದ್ದರು.

ವಿಶ್ವವಿದ್ಯಾಲಯ ವತಿಯಿಂದ ರಿಯಾಯಿತಿ ದರದಲ್ಲಿ ಊಟದ ವ್ಯವಸ್ಥೆ ಮಾಡಲಾಗಿದ್ದು ಸುಮಾರು 7 ಸಾವಿರ ಜನರು ಮೊದಲ ಊಟ ಮಾಡಿದ್ದಾರೆ. ಇನ್ನು ಬೆಂಗಳೂರು ನಗರ, ಬೆಂ.ಗ್ರಾಮಾಂತರ, ರಾಮನಗರ ಜಿಲ್ಲೆಗಳ ಜಿಲ್ಲಾ ಮಟ್ಟದ, ತಾಲೂಕು ಮಟ್ಟದಲ್ಲಿ ಆತ್ಯುತ್ತಮ ಯುವ ರೈತ, ರೈತ ಹಾಗೂ ರೈತ ಮಹಿಳೆಯರಿಗೆ ಇದೇ ವೇಳೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಇಂದು, ನಾಳೆ ಮತ್ತಷ್ಟು ಮಂದಿ ಆಗಮನ ಸಾಧ್ಯತೆ: ಶನಿವಾರ ಮತ್ತು ಭಾನುವಾರವಾಗಿರುವುದರಿಂದ ನಗರದ ಜನರು ಬಿಡುವು ಮಾಡಿಕೊಂಡು ಮತ್ತಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಮೇಳಕ್ಕೆ ಭೇಟಿ ನೀಡುವ ಸಾಧ್ಯತೆಗಳಿವೆ.



ಗಂಟೆಗೆ ಸುಲಿಯಲಿದೆ 800ರಿಂದ 1000 ತೆಂಗಿನಕಾಯಿ ಸಿಪ್ಪೆ

ತೆಂಗಿನ ಕಾಯಿ ಸಿಪ್ಪೆ ಸುಲಿಯಲು ಕೃಷಿ ಕಾರ್ಮಿಕರಿಗಾಗಿ ರೈತರ ಪರದಾಟ ತಪ್ಪಿಸಲು ಎಆರ್‌ಎಸ್ ಎಂಜಿನಿಯರಿಂಗ್ ಸಂಸ್ಥೆಯು ಪರಿಚಾರ ಕಲ್ಪಿಸಿದೆ. ಗಂಟೆಗೆ 800ರಿಂದ 1000 ತೆಂಗಿನಕಾಯಿ ಸಿಪ್ಪೆ ಸುಲಿಯ ಬಹುದಾದ ಯಂತ್ರವನ್ನು ಸಂಶೋಧಿಸಿದೆ. ಪ್ರತಿ 3 ಸೆಕೆಂಡಿಗೆ ಒಂದು ತೆಂಗಿನಕಾಯಿಯ ಸಿಪ್ಪೆಯನ್ನು ತೆಗೆಯಲಿದೆ. ಗಂಟೆಗೆ 800ರಿಂದ 1000 ತೆಂಗಿನಕಾಯಿಯ ಸಿಪ್ಪೆಯನ್ನು ತೆಗೆಯಲಿದೆ. ಇದು ಎಲೆಕ್ಟ್ರಿಕ್ ಯಂತ್ರವಾಗಿದ್ದು, ವಿದ್ಯುತ್ ಬಳಸಿಕೊಂಡು ಬಹಳ ಸುಲಭವಾಗಿ ತೆಂಗಿನಕಾಯಿಯನ್ನು ಸುಲಿಯಬಹುದಾಗಿದೆ. ಕೊಯಮತ್ತೂರಿನ ಎಆರ್‌ಎಸ್ ಎಂಬ ಸಂಸ್ಥೆಯು ಯಂತ್ರವನ್ನು ಅವಿಷ್ಕರಿಸಿದೆ. ಕೃಷಿ ಇಲಾಖೆ ಆಥವಾ ಕೃಷಿ ವಿವಿಯನ್ನು ಸಂಪರ್ಕಿಸಿ ಖರೀದಿ ಮಾಡಬಹುದಾಗಿದೆ. ಇದರ ಹೆಚ್ಚಿ 1.88 ಲಕ್ಷ ರೂ.ಗಳಾಗಿದ್ದು, ಸಾಮಾನ್ಯ ವರ್ಗದವರಿಗೆ 50 ಸಾವಿರ ರೂ. ಮತ್ತು ಪರಿಶಿಷ್ಟ ಜಾತಿ, ವಂಗಡದವರಿಗೆ 70 ಸಾವಿರ ಸಬ್ಸಿಡಿ ಸಿಗಲಿದೆ ಎಂದು ಸಂಸ್ಥೆಯ ಸಂಚಾಲಕ ರಕ್ಷಿತಾ ಮಾಹಿತಿ ನೀಡಿದರು.



ಮೆಕ್ಕೆಜೋಳದ ಸೈನಿಕ ಹುಳ ನಾಶಕ್ಕೆ ಕ್ರಿಮಿನಾಶಕ

ಮೆಕ್ಕೆಜೋಳದ ಸುಳಿಯನ್ನು ಕತ್ತರಿಸುವ ಸೈನಿಕ ಹುಳ ಮತ್ತು ಲದ್ದಿ ಹುಳಗಳ ಉಪಟಳ ನಿಯಂತ್ರಿಸಲು ಕೃಷಿ ವಿವಿಯು ಸೂಡೋಪ್ಟರಾ ಎಂಬ ಕ್ರಿಮಿನಾಶಕವನ್ನು ಪತ್ತೆ ಹಚ್ಚಿದೆ. ಸಾಮಾನ್ಯವಾಗಿ ಮೆಕ್ಕೆಜೋಳ ಬೆಳೆಯುವ ವೇಳೆ ಸೈನಿಕ ಹುಳು ಮೆಕ್ಕೆಜೋಳ ಗಿಡದ ಕುಡಿಯನ್ನೇ ಕತ್ತರಿಸುತ್ತದೆ. ರಾತ್ರಿ ವೇಳೆ ಗಿಡವನ್ನು ಮೇಯುವ ಹುಳ, ಹಗಲಿನಲ್ಲಿ ಎಲೆಯ ಕೆಳಭಾಗದಲ್ಲಿ ಆಥವಾ ಮಣ್ಣಿನಲ್ಲಿ ಏಪತುಕೊಂಡಿರುತ್ತದೆ. ಇಂತಹ ಹುಳವನ್ನು ನಿಯಂತ್ರಿಸಲು ಮತ್ತು ನಾಶಪಡಿಸಲು ಸೂಡೋಪ್ಟರಾ ಎಂಬ ಕ್ರಿಮಿನಾಶವನ್ನು ಕಂಡು ಹಿಡಿದಿದೆ.

ಸಿಂಪಡಣೆ ಹೇಗೆ?: ಡೋಗ ಬಾಧೆ ಇದ್ದ ವೇಳೆ ಪ್ರತಿ ಲೀಟರ್ ನೀರಿಗೆ 0.5 ಮಿಲೀ ಸೂಡೋಪ್ಟರಾ ಕ್ರಿಮಿನಾಶಕವನ್ನು ಬೆರೆಸಿ ಸಿಂಪಡಣೆ ಮಾಡಬೇಕು. ಒಂದು ವೇಳೆ ಹುಳುಗಳು ದಪ್ಪವಾಗಿದ್ದರೆ, 10 ಕೆಜಿ ಗೋಧಿ ತೌಡು ಆಥವಾ ಭತ್ತದ ತೌಡು ಮತ್ತು ಒಂದು ಕೆಜಿ ಬೆಲ್ಲವನ್ನು ತಕ್ಕಮಟ್ಟಿಗೆ ನೀರಿನಲ್ಲಿ ಬೆರೆಸಿಟ್ಟು ಮಾರನೇ ದಿನ 100 ಗ್ರಾಂ. ಥೈಯೋಡಿಕಾರ್ಬ್

ಕೀಟನಾಶಕವನ್ನು ಮಿಶ್ರಣ ಮಾಡಿ ಬೆಳೆಯ ಸುಳಿಯಲ್ಲಿ ಸಿಂಪಡಣೆ ಮಾಡುವುದರಿಂದಲೂ ಲದ್ದಿ ಹುಳದ ಉಪಟಳ ಕಡಿಮೆ ಮಾಡಬಹುದು ಎನ್ನುತ್ತಾರೆ ಕೀಟನಾಶಕ ವಿಭಾಗದ ಪ್ರಾಧ್ಯಾಪಕ ಪ್ರೊ. ಜೇಮ್ಸ್ ಸಾಯಾಕ್.



ದಂಟಿನ ಬೀಜದಲ್ಲಿ ತಯಾರಿಸಿ ಚಿಕ್ಕಿ, ಲಡ್ಡು, ಚಪಾತಿ

ಸಾಮಾನ್ಯವಾಗಿ ಜನರು ದಂಟಿನ ಸೊಪ್ಪಿನಲ್ಲಿ ಉಬ್ಬೆಸರು, ಬಸ್ಸಾರು, ಪಲ್ಯವನ್ನು ತಯಾರಿಸುತ್ತಾರೆ. ದಂಟಿನ ಸೊಪ್ಪು ಇರುವಾಗ ಆಹಾರಕ್ಕೆ ಮತ್ತು ಆದು ದಂಡೆಯಾಗಿ ಒಡಲು ಬೀಜವಾದ ಮೇಲೆ ಬತ್ತಗೆಗೆ ಬಳಸಲಾಗುತ್ತಿತ್ತು. ಆದರೆ, ಈ ದಂಟಿನ ಬೀಜದಿಂದ ಲಡ್ಡು ಚಿಕ್ಕಿ ಚಪಾತಿ, ಬಿಸ್ಕತ್ತು... ಹೀಗೆ ನಾನಾ ವಿಧದ ತಿಂಡಿ ತಿನಿಸುಗಳನ್ನು ಸಪ ದಂಟಿನ ಬೀಜದಿಂದ ತಯಾರಿಸಬಹುದು. ಹೌದು, ಚಿಕಿಬೆ ಆವರಣದ ಕೃಷಿ ಮೇಳದಲ್ಲಿ ದಕ್ಷಿಣ ಆಮೆರಿಕ ಮೂಲದ ಆಮರಾಂತೇಸಿ ಕುಟುಂಬ ಮತ್ತು ಆಮರಾಂತ್ ಜೀನಸ್‌ಗೆ ಸೇರಿದ ಬೀಜದ ದಂಟಿನ ಹೊಸ ಬೆಳೆಯನ್ನು ಸಂಶೋಧಿಸಿ ಬೆಳೆಸಲಾಗಿದೆ. ದಂಟಿನ ಬೀಜದಲ್ಲಿ ಶೇ.16ರಷ್ಟು ಪ್ರೋಟೀನ್ ಅಂಶವಿದೆ. ಅಮೈನೋ

ಕೃಷಿ ಮೇಳಕ್ಕೆ ಮಳೆಯಲ್ಲೂ ಜನಸಾಗರ

ಮೇಳದ 2ನೇ ದಿನವೂ ಸತತ ಮಳೆ | ಹೊಸ ಉತ್ಪನ್ನ, ತಳಿಗಳ ಬಗ್ಗೆ ಕೌತುಕದಿಂದ ಮಾಹಿತಿ ಪಡೆದ ಜನ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಿಂದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಆಯೋಜಿಸಿರುವ ಕೃಷಿ ಮೇಳಕ್ಕೆ ಸತತ ಎರಡನೇ ದಿನವೂ ವರುಣನ ಕಾಟ ಮುಂದುವರೆಯಿತು. ಆದರೆ ಸಮಾಧಾನದ ಸಂಗತಿ ಎಂದರೆ ಮಳೆಯನ್ನೂ ಲೆಕ್ಕಿಸದೇ ವಿದ್ಯಾರ್ಥಿಗಳು, ರೈತರು, ಸಾರ್ವಜನಿಕರು ಗುರುವಾರಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಶುಕ್ರವಾರ ಮೇಳಕ್ಕೆ ಭೇಟಿ ನೀಡಿದರು.

ಮೊದಲ ದಿನ ಮಳೆಯಿದ್ದರೂ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದು ವಿಶೇಷವಾಗಿತ್ತು. ಆದರೆ ಶುಕ್ರವಾರವೂ ಬೆಳಿಗ್ಗಿನಿಂದಲೂ ಮಳೆ ಶುರುವಾದರೂ ಜನತೆ ಹಿಂದೇಟು ಹಾಕದೇ ಜಿಕೆವಿಕೆ ಕಡೆ ಆಗಮಿಸಿದ್ದು ಮೇಳ ಆಯೋಜಿಸಿದ್ದಕ್ಕೂ ಸಾರ್ಥಕವಾಯಿತು ಎಂಬ ಧನ್ಯತಾಭಾವ ವಿವಿ ಸಿಬ್ಬಂದಿಯಿಂದ ವ್ಯಕ್ತವಾಯಿತು. ವಾರಾಂತ್ಯದ ಹಿನ್ನೆಲೆಯಲ್ಲಿ ಇಂದು(ಶನಿವಾರ) ಮತ್ತು ಕಡೆಯ ದಿನವಾದ ನಾಳೆ (ಭಾನುವಾರ) ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಆಗಮಿಸುವ ನಿರೀಕ್ಷೆ ಇದೆ.

ಮಳೆಯಿಂದಾಗಿ ಎಲ್ಲೆಡೆ ಕೆಸರು ಉಂಟಾಗಿದ್ದರೂ ಬೇಸರಿಸಿಕೊಳ್ಳದೇ ಉತ್ಸಾಹದಿಂದ ಮಳಿಗೆಗಳಿಗೆ ಭೇಟಿ ನೀಡಿ ಕೃಷಿ ಉತ್ಪನ್ನ, ಹೊಸತಂತ್ರಜ್ಞಾನ, ಪರಿಕರಗಳನ್ನು ವೀಕ್ಷಿಸಿ ಮಾಹಿತಿ ಪಡೆದರು. ಕೆಲವರು ಖರೀದಿಯಲ್ಲೂ ಮಗ್ನವಾಗಿದ್ದರು. ಇದಲ್ಲದೇ, ಕೃಷಿ ವಿವಿ ಸಂಶೋಧಿಸಿರುವ ನೂತನ ತಳಿಗಳನ್ನು ವೀಕ್ಷಿಸಿ, ಸೆಲ್ಫಿ ತೆಗೆದು ಕೊಂಡು ಸಂತಸ ವ್ಯಕ್ತಪಡಿಸಿದರು. ದೂರದೂರು ಗಳಿಂದಲೂ ರೈತರು ಮೇಳಕ್ಕೆ ಆಗಮಿಸಿದ್ದು ವಿಶೇಷವಾಗಿತ್ತು.

ಚಿಕ್ಕಮಕ್ಕಳನ್ನೂ ಕರೆದುಕೊಂಡು ಬಂದು ಮೇಳದ ವಿಶೇಷಗಳನ್ನು ಪೋಷಕರು ವಿವರಿಸುತ್ತಿದ್ದುದು ಒಂದೆಡೆ ಕಂಡುಬಂದರೆ, ಮತ್ತೊಂದೆಡೆ ವಯಸ್ಸಾಗಿದ್ದರೂ ಮೇಳಕ್ಕೆ ಆಗಮಿಸಿ ಕೃಷಿ ಬಗ್ಗೆ ಮಾಹಿತಿ ಪಡೆಯುತ್ತಿದ್ದ ಹಿರಿ ಜೀವಗಳೂ ಹೆಚ್ಚಿನ ಸಂಖ್ಯೆಯಲ್ಲಿ ದ್ದವು. ವಿದ್ಯಾರ್ಥಿಗಳೂ ಕಾಲೇಜು ಬಸ್‌ಗಳಲ್ಲಿ ಆಗಮಿಸಿದ್ದು ಕಂಡುಬಂತು. ಸಾಮಾಜಿಕ ಜಾಲತಾಣ ದಲ್ಲಿ 5.20 ಲಕ್ಷ ಜನ ಕೃಷಿ ಮೇಳ ವೀಕ್ಷಿಸಿದ್ದಾರೆ.

ಹಸಿರು ಮನೆಯ ಆಕರ್ಷಣೆ: ಹಸಿರು ಮನೆಯಲ್ಲಿ ಬೆಳೆದಿದ್ದ ವಿವಿಧ ತರಕಾರಿ, ಬೃಹತ್ ಬಾಳೆ ಗೊನೆ, ಹೆಚ್ಚು ಇಳುವರಿ ಬಂದಿದ್ದ ಪಪ್ಪಾಯಿಯನ್ನು ಜನರು ಆಸಕ್ತಿಯಿಂದ ನೋಡುತ್ತಿದ್ದುದು ಕಂಡುಬಂತು. ವಿವಿ ಸಂಶೋಧಿಸಿರುವ ಹೊಸ ತಳಿಗಳನ್ನು ವೀಕ್ಷಿಸಿ ಕೆಲವರು ಬೆರಗಾದರು. ಕುಟುಂಬಸಮೇತ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದುದು ಶುಕ್ರವಾರ ಕಂಡುಬಂತು.



ಸಂಚಾರ ದಟ್ಟಣೆ: ಜನರ ಪರದಾಟ

ಮೊದಲ ದಿನ ಸಂಚಾರ ದಟ್ಟಣೆ ಉಂಟಾಗದಂತೆ ವ್ಯವಸ್ಥೆ ಮಾಡಲಾಗಿತ್ತು. ಆದರೆ ಶುಕ್ರವಾರ ಹೆಚ್ಚಿನ ಸಂಖ್ಯೆಯಲ್ಲಿ ಜನತೆ ಆಗಮಿಸಿದ್ದರಿಂದ ಪ್ರವೇಶ ದ್ವಾರದಿಂದ ಪಾರ್ಕಿಂಗ್ ಸ್ಥಳಕ್ಕೆ ತೆರಳಲು ವಾಹನ ಸವಾರರು ಪರದಾಡಬೇಕಾಯಿತು. ಮತ್ತೊಂದೆಡೆ, ಜಿಕೆವಿಕೆಗೆ ಹೆಚ್ಚಿನ ಸಂಖ್ಯೆಯಲ್ಲಿ ವಾಹನಗಳು ಆಗಮಿಸಿದ್ದರಿಂದ ಬಳ್ಳಾರಿ ರಸ್ತೆಯ ಹೆಬ್ಬಾಳ ಮೇಲ್ಸೇತುವೆಯಿಂದ ಸಂಚಾರ ದಟ್ಟಣೆ ಉಂಟಾಗಿತ್ತು. ಬಳಿಕ ಸಂಚಾರ ಪೊಲೀಸರು ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು.



ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಆಯೋಜಿಸಿರುವ ಕೃಷಿ ಮೇಳದಲ್ಲಿ ಹನಿ ನೀರಾವರಿ ಕುರಿತು ಪರಿಣಾಮಕಾರಿ ಪ್ರಾತ್ಯಕ್ಷಿಕೆ ಮೂಲಕ ರೈತರನ್ನು ಆಕರ್ಷಿಸುತ್ತಿರುವ ಹನಿ ನೀರಾವರಿ ಸಂಸ್ಥೆಯ ಮಳಿಗೆ.

ರೈತರು ವ್ಯವಹಾರದಲ್ಲೂ ಚುರುಕಾಗಬೇಕು

ಯೋಜನಾಬದ್ಧವಾಗಿ ಕೃಷಿ ಮಾಡಿ | ಮಾರಾಟ ಕೇಂದ್ರಗಳನ್ನು ಸ್ಥಾಪಿಸಿಕೊಳ್ಳಿ: ಎಸ್.ಎ.ಪಾಟೀಲ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರೈತರ ಒಕ್ಕಲುತನ ವೈವಿಧ್ಯಮಯವಾಗಿದ್ದು ವ್ಯವಹಾರಿಕ ಮತ್ತು ವ್ಯಾಪಾರ ಕ್ಷೇತ್ರದಲ್ಲೂ ರೈತರು ಹೆಚ್ಚಾಗಿ ಕಾಣಿಸಿಕೊಳ್ಳಬೇಕು. ರೈತರೇ ಮಾರಾಟ ಕೇಂದ್ರಗಳನ್ನೂ ಸ್ಥಾಪಿಸಿಕೊಳ್ಳಬೇಕು ಎಂದು ಧಾರವಾಡ ಕೃಷಿ ವಿವಿ ವಿಶ್ರಾಂತ ಕುಲ ಪತಿ ಎಸ್.ಎ. ಪಾಟೀಲ್ ಸಲಹೆ ನೀಡಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಿಂದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಹಮ್ಮಿಕೊಳ್ಳ ಲಾಗಿರುವ ಕೃಷಿಮೇಳದಲ್ಲಿ ಶುಕ್ರವಾರ ಆಯೋಜಿಸಿದ್ದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ರೈತರು ಬರೀ ವ್ಯವಸಾಯವನ್ನಷ್ಟೇ ಮಾಡಿದರೆ ಸಾಕಾಗುವುದಿಲ್ಲ, ಕೃಷಿಯನ್ನು ಯೋಜನಾಬದ್ಧ ವಾಗಿ ಮಾಡಬೇಕು. ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಮಾರುಕಟ್ಟೆ ಬದಲಾವಣೆ ಮಾಡಲು ರೈತರೇ ವ್ಯಾಪಾರ ಸಂಘಗಳನ್ನು ಸ್ಥಾಪನೆ ಮಾಡಬೇಕು ಎಂದು ಕರೆ ನೀಡಿದರು.

ಸಮತೋಲನ ಬೇಸಾಯ ಪದ್ಧತಿ ಅಳವಡಿಸಿ ಕೊಂಡು ಆದಾಯ ದ್ವಿಗುಣ ಮಾಡಿಕೊಳ್ಳಬೇಕು. ಬರೀ ನ್ಯೂಸ್ ಪೇಪರ್ ಓದಿದರಷ್ಟೇ ಸಾಲದು. ಇದರ ಜೊತೆಗೆ ವಿವಿಧ ಮಾದರಿಯ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳಬೇಕು. ಸಮಗ್ರ ಕೃಷಿ ಬಗ್ಗೆ ಅರಿತು ಅದನ್ನು ಅಳವಡಿಕೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ರೈತರೇ ಬೆಲೆ ಕಟ್ಟಬೇಕು: ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಎಂ. ಎನ್.ಶೀಲವಂತರ್ ಮಾತನಾಡಿ, ಕೃಷಿಯನ್ನು ವ್ಯಾಪಾರಕ್ಕೆ ಹೋಲಿಕೆ ಮಾಡುವುದು ಅಸಾಧ್ಯ. ಇದು ಬದಲಾಗಿ ರೈತರು ತಾವು ಬೆಳೆದ ಬೆಳೆಗೆ ಬೆಲೆ ಕಟ್ಟುವಂತೆ ಆಗಬೇಕು. ಆದರೆ, ಈಗ ಒಂದು ಬೆಳೆಯನ್ನು ಹೆಚ್ಚಾಗಿ ಬೆಳೆದರೆ ಬೆಲೆ ಕಡಿಮೆ ಆಗುತ್ತದೆ. ಬೆಳೆಯೊಂದನ್ನು ಕಡಿಮೆ ಬೆಳೆದರೆ ಹೆಚ್ಚು ಬೆಲೆ ಸಿಗುತ್ತದೆ. ಆದ್ದರಿಂದ ವೈವಿಧ್ಯಮಯ ಬೆಳೆ ಬೆಳೆಯಬೇಕು ಎಂದು ತಿಳಿಸಿದರು. ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಅಧ್ಯಕ್ಷ ಜಿ.ಶಿವನ ಗೌಡ ಅವರು ಕೃಷಿ ವಿವಿಗೆ ಇದೇ ವೇಳೆ 5 ಲಕ್ಷ ರು. ಮೊತ್ತದ ಚೆಕ್ ನೀಡಿದರು. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ನಾರಾಯಣಗೌಡ, ಕೃಷಿ ವಿವಿ ಕುಲಪತಿ ಡಾ. ರಾಜೇಂದ್ರ ಪ್ರಸಾದ್, ವಿಸ್ತರಣಾ ನಿರ್ದೇಶಕ ಡಾ. ದೇವಕುಮಾರ್ ಮತ್ತಿತರರು ಇದ್ದರು.



ಕೃಷಿಯಲ್ಲಿ ಉತ್ತಮ ಸಾಧನೆ ಮಾಡಿದವರಿಗೆ ಜಿಕೆವಿಕೆಯಲ್ಲಿ ಏರ್ಪಡಿಸಿದ್ದ ಕೃಷಿ ಮೇಳದಲ್ಲಿ ಜಿಲ್ಲಾ ಮಟ್ಟದ ಸಾಧಕ ಯುವ ರೈತ ಮಹಿಳೆ ಹಾಗೂ ಪ್ರಗತಿಪರ ರೈತ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

3 ಜಿಲ್ಲೆ ರೈತರಿಗೆ ಪ್ರಶಸ್ತಿ ಪ್ರದಾನ

ಕೃಷಿಯಲ್ಲಿ ಸಾಧನೆಗೈದ ಬೆಂಗಳೂರು ಗ್ರಾಮಾಂತರ, ನಗರ ಹಾಗೂ ರಾಮ ನಗರ ಜಿಲ್ಲೆ ರೈತರಿಗೆ ಜಿಲ್ಲಾ ಹಾಗೂ ತಾಲೂಕು ಮಟ್ಟದ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಯುವ ರೈತ ಮಹಿಳೆ ಪ್ರಶಸ್ತಿಗೆ ಸುನಂದಮ್ಮ, ಬಿ. ಎನ್.ಚಂದ್ರಕಲಾ, ಆರ್.ಲಕ್ಷ್ಮೀ ಭಾಜನರಾದರೆ ಆನಂದ್, ಚನ್ನೇಗೌಡ ಹಾಗೂ ಗೋವಿಂದರಾಜು ಅವರಿಗೆ ಪ್ರಗತಿಪರ ರೈತ ಪ್ರಶಸ್ತಿ ನೀಡಲಾಗಿದೆ.

13-11-2021 Kp Pg 05

For more information visit
University Library Website
Web - uasbagrilibindia.org
E-mail- librarian@uasbangalore.edu.in

ನಮ್ಮದು ಭೂಮಿ ಆಧಾರಿತ ಬದುಕು | ರೈತರ ಜೀವನ ಶ್ರಮದಾಯಕವಾದರೂ ಸುಂದರ | ಕೃಷಿ ಸಾಧಕರಿಗೆ ಸನ್ಮಾನ

ಕೃಷಿಯಿಂದ ಮಾನವನಿಗೆ ಭದ್ರತೆ, ಬದ್ಧತೆ

ಶಿವಮೊಗ್ಗ: ಮಾನವ ಜೀವನಕ್ಕೆ ಭದ್ರತೆ ಮತ್ತು ಬದ್ಧತೆ ಬೇಕು. ಕೃಷಿಯಿಂದ ಈ ಎರಡೂ ಸಾಧ್ಯವಾಗಿದ್ದು, ಪ್ರಸ್ತುತ ಯಾಂತ್ರೀಕೃತ ಬದುಕನ್ನು ಬದಲಾಯಿಸಿಕೊಂಡು ಉತ್ತಮ ಆಹಾರ ಪದ್ಧತಿ ಮತ್ತು ಜೀವನ ಶೈಲಿ ಅಳವಡಿಸಿಕೊಳ್ಳಬೇಕು ಎಂದು ಚಿತ್ರದುರ್ಗ ಮುರುಘಾ ಮಠದ ಡಾ. ಶಿವಮೂರ್ತಿ ಮುರುಘಾ ಶರಣರು ತಿಳಿಸಿದರು.

ಕೆಳದಿ ಶಿವಪ್ಪನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿವಿ ಹಾಗೂ ಕೃಷಿ, ತೋಟಗಾರಿಕೆ, ಮೀನುಗಾರಿಕೆ ಮತ್ತು ಕೃಷಿ ಸಂಬಂಧಿತ ಅಭಿವೃದ್ಧಿ ಇಲಾಖೆಗಳ ಸಹಯೋಗದೊಂದಿಗೆ ನ. 12 ಮತ್ತು 13ರಂದು ಕೆಳದಿ ಶಿವಪ್ಪನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿವಿಯ ಆವರಣದಲ್ಲಿ ಏರ್ಪಡಿಸಲಾಗಿದ್ದ ಕೃಷಿ ಮೇಳ-2021 ನ್ನು ಉದ್ಘಾಟಿಸಿ ಆಶೀರ್ವಚನ ನೀಡಿದರು.

ಯಾವ ದೇಶದಲ್ಲಿ ಕೃಷಿ ಜೀವನ ಅಭದ್ರತೆಯಿಂದ ಕೂಡಿರುತ್ತದೋ ಆಂತಹ ದೇಶದ ಭವಿಷ್ಯ ಉಜ್ವಲವಾಗಿರುವುದಿಲ್ಲ. ಕೃಷಿ ಪ್ರಧಾನ ಜೀವನದಲ್ಲಿ ನಿರಂತರ ಭದ್ರತೆಯಂತೂ ಇದ್ದೇ ಇರುತ್ತದೆ. ಆವಿಷ್ಕಾರ, ತಂತ್ರಜ್ಞಾನದಿಂದ ಆಹಾರ ಧಾನ್ಯ ಉತ್ಪಾದಿಸಲು ಸಾಧ್ಯವಿಲ್ಲ. ಭೂಮಿ ಮೂಲಕ



ಶಿವಮೊಗ್ಗದಲ್ಲಿ ಕೃಷಿ ಮತ್ತು ತೋಟಗಾರಿಕೆ ವಿವಿ ಆವರಣದಲ್ಲಿ ಏರ್ಪಡಿಸಲಾಗಿದ್ದ ಕೃಷಿ ಮೇಳದಲ್ಲಿ ಕೃಷಿ ಸಾಧಕರನ್ನು ಸನ್ಮಾನಿಸಲಾಯಿತು.

ಆಹಾರೋತ್ಪನ್ನ ಸಾಧ್ಯ. ನಮ್ಮದು ಭೂಮಿ ಆಧಾರಿತ ಬುದುಕು. ಭೂಮಿ ಅಥವಾ ಜಮೀನು ಬಿಟ್ಟರೆ ಬದುಕೇ ಇಲ್ಲ ಎಂದರು.

ರಾಗಿ-ಸಿರಿಧಾನ್ಯ ಬಳಸಿ: ರಾಗಿ ತಿಂದು ನಿರೋಗಿಯಾಗು ಎನ್ನುವ ನುಡಿಯಂತೆ, ನಾವೆಲ್ಲ ದಿನಕ್ಕೊಮ್ಮೆಯಾದರೂ ರಾಗಿ, ಸಿರಿಧಾನ್ಯಗಳಿಂದ ತಯಾರಿಸಿದ ಪದಾರ್ಥ ಸೇವಿಸಬೇಕು. ನಮಗೆ ಹೊನ್ನು ಅಕ್ಕಿ ಬೆಳ್ಳಿ ಎನ್ನುತ್ತಾರೆ. ಹಾಗೆಯೇ ಆದರ ಗುಣವೂ ಸಹ ಇದೆ. ಸಿರಿಧಾನ್ಯ ಸೇವನೆಯಿಂದ ವೈದ್ಯರನ್ನು ದೂರವಿಟ್ಟ ಬದುಕು ಹಸನು ಮಾಡಬಹುದು ಎಂದರು.

ಆಧುನಿಕ, ಕೃತಕ ಮತ್ತು ಯಾಂತ್ರೀಕೃತ ಬದುಕಿನಿಂದ ಮುಕ್ತ ಹೊಂದಲು ಜೀವನ ಶೈಲಿ ಮತ್ತು ಆಹಾರ ಪದ್ಧತಿ ಬದಲಾಯಿಸಿಕೊಂಡು, ಪರಿಶ್ರಮದ ಜೀವನ ಮತ್ತು ರಾಗಿ, ಸಿರಿಧಾನ್ಯಯುಕ್ತ ಆಹಾರಕ್ಕೆ ಬದಲಾಗಬೇಕು. ಪರಿಶ್ರಮದಿಂದ ಜೀವನ ನಡೆಸುವವರ ಬಳಿ ಯಾವ ರೋಗವೂ ಸುಳಿಯುವುದಿಲ್ಲ. ಆದ್ದರಿಂದ ರೈತರ ಬದುಕು ಶ್ರಮದಾಯಕವಾದರೂ ಸುಂದರ ಎಂದರು.

ರೈತರು ಒಂದೇ ರೀತಿ ಬೆಳೆ, ಒಂದೇ ರೀತಿ ವಾಣಿಜ್ಯ ಬೆಳೆ ಬೆಳೆಯುವುದಕ್ಕಿಂತ ಬಹುಬೆಳೆ ಬೆಳೆಯಬೇಕು. ಬಹುಬೆಳೆ ಪದ್ಧತಿ ಅನುಸರಿಸುವುದು ಮುಖ್ಯ ಎಂದು ಸಲಹೆ ನೀಡಿದ ಅವರು, ರೈತರ ಬೆಳೆಗೆ ಸೂಕ್ತ ಬೆಲೆ ದೊರಕದ ಕಾರಣ ಬೆಂಬಲ ಬೆಲೆ ಬೇಡುತ್ತಾರೆ. ರೈತರ ಬೆಳೆಗೆ ಉತ್ತಮ ಬೆಲೆ ಲಭಿಸುವಂತೆ ಆಗಬೇಕು ಎಂದರು. ವಿಶೇಷ ಆಹ್ವಾನಿತರ ಭಾಷಣವನ್ನು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹಾಗೂ ಮರ ಆಧಾರಿತ ಕೃಷಿಕ ವಿಜಯಪುರದ ಹೆಚ್.ವಿ ಸಜ್ಜನರವರು ನಡೆಸಿಕೊಟ್ಟರು. ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿವಿ ಕುಲಪತಿ ಡಾ.ಎಂ.ಕೆ. ನಾಯಕ್ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮುರಘಾ ಶ್ರೀಗಳು ಇತರೆ ಗಣ್ಯರು ಕೃಷಿ ಕ್ಷೇತ್ರದಲ್ಲಿ ಸಾಧನೆ ಮಾಡಿದ ಶ್ರೇಷ್ಠ ರೈತ ಮತ್ತು ರೈತ ಮಹಿಳೆ ಪ್ರಶಸ್ತಿ ಪುರಸ್ಕಾರ ವಿತರಿಸಿದರು. ಚಿಕ್ಕಮಗಳೂರಿನ ಬ್ಲಾಕ್ ಗೋಲ್ಡ್ ಲೀಗ್ ಅಧ್ಯಕ್ಷ ಕೆ.ಆರ್. ಕೇಶವ ಹಾಗೂ ಪ್ರಗತಿಪರ ಕೃಷಿಕ ಕೆ. ಗುಣಪಾಲ್ ಕಡಂಬ ತಾಂತ್ರಿಕತೆ ಮತ್ತು ತಳಿಗಳ ಬಿಡುಗಡೆ ಮಾಡಿದರು. ವಿವಿ ಕುಲಪತಿ ಡಾ.ಎಂ.ಕೆ. ನಾಯಕ್, ಶಿಕ್ಷಣ ನಿರ್ದೇಶಕ ಡಾ.ಎಂ. ಹನುಮಂತಪ್ಪ, ಕುಲಸಚಿವ ಡಾ.ಲೋಕೇಶ್.ಆರ್, ಡಾ.ಮೃತ್ಯುಂಜಯ ವಾಲಿ, ಡಾ.ದಿನೇಶ್ ಕುಮಾರ್.ಎಂ ಡಾ.ಶಿವಶಂಕರ್ ತಾಂತ್ರಿಕ ಕೈಪಿಡಿಗಳ ಬಿಡುಗಡೆ ಮಾಡಿದರು.

ಕೃಷಿ ಮೇಳಗಳು: ಕೃಷಿ ಮೇಳದಲ್ಲಿ ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ ಸೇರಿದಂತೆ ವಿವಿಧ ಜಿಲ್ಲೆಗಳ ಕೃಷಿ, ತೋಟಗಾರಿಕೆ, ಕೃಷಿ ವಿಜ್ಞಾನ ಕೇಂದ್ರ, ಪಶುಸಂಗೋಪನೆ, ಕಾನೂ ಸೇವಾ ಪ್ರಾಧಿಕಾರ ಸೇರಿದಂತೆ ವಿವಿಧ ಇಲಾಖೆಗಳ ಒಟ್ಟು 36 ಮಳಿಗೆ ಸ್ಥಾಪಿಸಲಾಗಿದ್ದು, ರೈತರ, ಸಾರ್ವಜನಿಕರ ಗಮನ ಸೆಳೆಯುತ್ತಿವೆ. ವಿವಿ ವಿಸ್ತರಣಾಧಿಕಾರಿ ಡಾ.ಬಿ. ಹೇಮ್ಲಾ ನಾಯ್ಕ ಸ್ವಾಗತಿಸಿದರು. ಸಂಶೋಧನಾ ನಿರ್ದೇಶಕ ಡಾ.ಮೃತ್ಯುಂಜಯ ಸಿ. ವಾಲಿ ವಂದಿಸಿದರು.

13-11-2021
Sk Pg 12

Introduce millets in midday meal, Centre tells states

BENGALURU, DHNS



The Union government's letter also mentions about the benefits of consuming millets in overcoming malnutrition problems among children. DH FILE PHOTO

The Ministry of Education, along with the Ministry of Agriculture, has requested the states to introduce millets in midday meal (Pradhan Mantri Poshan Shakti Nirman) menu, at least once a week.

In a joint communication to chief secretaries of all the states, the Union government has urged the states to introduce the millets in the midday meal menu and also explore the possibilities to introduce the millets, preferably in the districts where consuming millets is a culturally accepted habit.

"To begin with, you may introduce millets-based menu once a week. Moreover, millet-based recipes may be prepared during cooking competitions to be conducted among cook-cum-helpers to popularise it," read the communication.

The departments concerned at the state levels have also been advised to prepare small videos for creating awareness about the goodness of millets and showcase them in schools.

"The use of millets may be discussed in or during the meetings with parents and School Development Monitoring Committees," stated the communication.

The letter also mentions about the benefits of consuming millets in overcoming malnutrition issues among kids.

However, this is not the first effort by the Union government to popularise millets. Earlier, it had requested the states many times to include millets in the midday meal.

Karnataka took a lead in this and introduced the millets in midday meals on a pilot basis in select 1,000 government schools in Bengaluru Urban district.

Akshaya Patra Foundation had taken the initiative and served millet meals for 100 days. It later submitted a report to Education department saying that children's health has improved after they started consuming millet meals. But the department has not yet acted on it.

However, the department officials said that it is difficult to get the millets in such a large quantity to include it in midday meals.

13-11-2021
Dec Hrd
Pg 04

"ರಾಜ್ಯದ ಎಲ್ಲೆಡೆಯಿಂದ ಜಿಕೆವಿಕೆಗೆ ಬಂದ ಕೃಷಿ ಆಸಕ್ತರು | ಕೌತುಕ ಸೃಷ್ಟಿಸುವ ತಂತ್ರಜ್ಞಾನಗಳು

ಮಳೆಗೂ ಕುಂದದ ಕೃಷಿ ಮೇಳದ ಸಂಭ್ರಮ

■ ವಿಕ ಸುದ್ದಿಲೋಕ ಬೆಂಗಳೂರು

ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ (ಜಿಕೆವಿಕೆ) ನಡೆಯುತ್ತಿರುವ ಕೃಷಿ ಮೇಳಕ್ಕೆ ಎರಡನೇ ದಿನವಾದ ಶುಕ್ರವಾರ ಮಳೆಯ ನಡುವೆಯೂ ರಾಜ್ಯದ ಮೂಲೆ ಮೂಲೆಗಳಿಂದ ಜನಸಾಗರವೇ ಹರಿದು ಬಂದಿತ್ತು.

ರೈತರು, ರೈತ ಮಹಿಳೆಯರು, ಉದ್ಯಮಿಗಳು, ವಿದ್ಯಾರ್ಥಿಗಳು, ಕೃಷಿಯ ಬಗ್ಗೆ ಆಸಕ್ತಿ ಉಳ್ಳವರು, ಸಂಶೋಧಕರು, ವಿಜ್ಞಾನಿಗಳು, ಪ್ರಾಧ್ಯಾಪಕರು ಹೀಗೆ ಎಲ್ಲಾ ಬಗೆಯ ಜನರೂ ಕೃಷಿ ಮೇಳಕ್ಕೆ ತಂಡೋಪ ತಂಡವಾಗಿ ಬಂದರು. ಹೀಗೆ ಬಂದವರು ಎಲ್ಲಿಯೂ ಒಂದೆಡೆ ನಿಲ್ಲದೆ, ಕೂರದೆ, ಹತ್ತಾರು ಎಕರೆಯಷ್ಟು ವ್ಯಾಪ್ತಿಯಲ್ಲಿ ತೆರೆದುಕೊಂಡಿದ್ದ ಕೃಷಿ ಮೇಳವನ್ನು ಅಡ್ಡಾಡುತ್ತಾ ಕಣ್ತುಂಬಿಕೊಂಡರು.

ಒಂದೆಡೆ ಹೊಸ ತಳಿಗಳ ಪ್ರಾತ್ಯಕ್ಷಿಕೆ, ಮತ್ತೊಂದೆಡೆ ಕೃಷಿಗೆ ನವನವೀನ ಯಂತ್ರೋಪಕರಣಗಳು, ಇನ್ನೊಂದೆಡೆ ಹೆಚ್ಚು ಲಾಭ ತಂದುಕೊಡಬಹುದಾದ ದುಬಾರಿ ಬೆಲೆಯ ಬಗೆ ಬಗೆಯ ಜಾನುವಾರುಗಳು ನೋಡುಗರನ್ನು ಸೆಳೆದವು.

ಎರಡು ದಿನಗಳಿಂದ ಒಂದೇ ಸಮನೆ ಮಳೆ ಸುರಿಯುತ್ತಿದ್ದ ಪರಿಣಾಮ ಕೃಷಿ ಮೇಳದಲ್ಲಿ ಜನ, ವಾಹನಗಳ ಸಂಚಾರದಿಂದ ಎಲ್ಲೆಡೆ ಕೆಸರು ತುಂಬಿತ್ತು. ಈ ಕೆಸರಿನಲ್ಲಿಯೇ ಬಟ್ಟೆಗಳನ್ನು ಮೇಲಕ್ಕೆತ್ತಿಕೊಂಡು ಗದ್ದೆ, ತೋಟದಲ್ಲಿ ಕೆಲಸಕ್ಕಿಳಿದವರಂತೆ ಅತ್ಯಂತ ಸಂಭ್ರಮದಿಂದ ಮೇಳವನ್ನು ವೀಕ್ಷಿಸಿದರು.

ಎರಡು ವರ್ಷಗಳ ನಂತರ ತುಂಬಾ ಕುತೂಹಲದಿಂದ ಮತ್ತು ಆಸಕ್ತಿಯಿಂದ ರಾಜ್ಯದ ಹಲವೆಡೆಯಿಂದ ಬಂದಿದ್ದ ರೈತರು ಛತ್ರಿ ಹಿಡಿದು ಮೇಳ ನೋಡಿದರು. ಆದರೆ ಮೇಳದ ಸ್ಥಳ ಜೇಡಿಮಣ್ಣಿನಿಂದ ಕೂಡಿದ್ದು, ಕಾಲು ಇಟ್ಟರೆ ಜಾರುತ್ತಿತ್ತು. ಮೇಳ ನೋಡಲು ಬಂದಿದ್ದ ಹಲವು ಮಂದಿ ಜಾರಿ ಬಿದ್ದ ಪ್ರಸಂಗಗಳು ನಡೆದವು. ಕೃಷಿ ಮೇಳದ ಮಳಿಗೆಗಳ ಮುಂಭಾಗದ ರಸ್ತೆಗಳು ಪೂರ್ತಿ ಕೆಸರು ಗದ್ದೆಗಳಾಗಿ ಪರಿವರ್ತನೆಯಾಗಿದ್ದವು.

ನರ್ಸರಿಗಳಲ್ಲಿ ಜನವೋ ಜನ

ಬೆಂಗಳೂರಿನ ಮಂದಿ ನರ್ಸರಿಗಳಿಗೆ ನುಗ್ಗಿತಮಗೆ ಇಷ್ಟವಾದ, ಸಸಿ-ಬೀಜಗಳನ್ನು ಖರೀದಿಸುತ್ತಿದ್ದರು. ಇನ್ನು ಕೆಲವರು ತಾರಸಿ ತೋಟಕ್ಕೆ ಬೇಕಾದ ಪರಿಕರಗಳನ್ನು ಸಸಿಗಳನ್ನು, ಅಲಂಕಾರಿಕ ಮತ್ತು ಔಷಧೀಯ ಸಸಿಗಳನ್ನು ಖರೀದಿಸಿದರು. ದೂರದ ಊರುಗಳಿಂದ ಬಂದಿದ್ದ ರೈತರು ಹೊಸ ತಳಿಯ ಹಲಸು, ಮಾವು, ಸಪೋಟ, ಸೀತಾಫಲ ಸೇರಿದಂತೆ ನಾನಾ ಹಣ್ಣಿನ ಸಸಿಗಳನ್ನು ಖರೀದಿಸಿ ಕೊಂಡೊಯ್ಯುತ್ತಿದ್ದರು. ಮೇಳದಲ್ಲಿ ಖಾಸಗಿ ಮತ್ತು ತೋಟಗಾರಿಕೆ, ಕೃಷಿ ಮತ್ತಿತರ ಇಲಾಖೆಯ ಸರಕಾರಿ ಸಂಸ್ಥೆಗಳು ಕೂಡ ನರ್ಸರಿ ಮಳಿಗೆಗಳನ್ನು ತೆರೆದಿದ್ದರು.



ಚಿತ್ರಗಳು: ಕೆ.ಎಸ್. ಗಣೇಶ್



1.76 ಲಕ್ಷ ಜನರ ಆಗಮನ

ಕೃಷಿ ಮೇಳಕ್ಕೆ 2ನೇ ದಿನವಾದ ಶುಕ್ರವಾರ 1.76 ಲಕ್ಷ ಮಂದಿ ಆಗಮಿಸಿದ್ದರು. ಆನ್ ಲೈನ್‌ನಲ್ಲಿ 4.20 ಲಕ್ಷ ಮಂದಿ ವೀಕ್ಷಿಸಿದ್ದಾರೆ. ಏಳು ಸಾವಿರ ಮಂದಿ ಊಟ ಮಾಡಿದ್ದಾರೆ. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ ಜಿಲ್ಲೆಗಳ ಜಿಲ್ಲಾ ಮಟ್ಟ, ತಾಲೂಕು ಮಟ್ಟದಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಯುವ ರೈತರು ಮತ್ತು ರೈತ ಮಹಿಳೆಯರಿಗೆ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ಶನಿವಾರ-ಭಾನುವಾರ ಹೆಚ್ಚು ಜನರ ನಿರೀಕ್ಷೆ

ಶನಿವಾರ ಮತ್ತು ಭಾನುವಾರ ಬಹುತೇಕ ಐಟಿ-ಬಿಟಿ ಮತ್ತಿತರರಿಗೆ ರಜೆ ಇರುವುದರಿಂದ ಕೃಷಿ ಮೇಳಕ್ಕೆ ಆಗಮಿಸುವವರ ಸಂಖ್ಯೆ ಹೆಚ್ಚಾಗುವ ಸಾಧ್ಯತೆಯಿದೆ.

ಮೊಟ್ಟೆಯೊಂದಿಗೆ ಊಟ



ಶುಕ್ರವಾರ ಕೃಷಿ ಮೇಳಕ್ಕೆ ಬಂದಿದ್ದ ಎಲ್ಲರಿಗೂ ಬಿಸಿ ಬಿಸಿ ಮುದ್ದೆ, ತರಕಾರಿ-ಕಾಳಿನ ಹುಳಿ, ಅನ್ನ, ರಸಂ, ಪಲ್ಯದ ಜತೆಗೆ ಬೇಯಿಸಿದ ಮೊಟ್ಟೆಯನ್ನೂ ಬಡಿಸಲಾಯಿತು. ಲಕ್ಷಾಂತರ ಮಂದಿ ರೈತರು ಖುಷಿಯಿಂದ ಊಟ ಸವಿದರು. ಇದೇ ವೇಳೆ ಕೃಷಿ ವಿವಿ ಕುಲಪತಿ ಡಾ. ಎಸ್. ರಾಜೇಂದ್ರ ಪ್ರಸಾದ್ ಅವರು ಕೂಡ ರೈತರೊಂದಿಗೆ ಕೂತು ಊಟ ಮಾಡಿದರು. ಜತೆಗೆ ರೈತರ ಯೋಗಕ್ಷೇಮ ವಿಚಾರಿಸುತ್ತಾ, ಎಲ್ಲರೂ ಸಾವಧಾನದಿಂದ ಊಟ ಮಾಡುವಂತೆ ಹೇಳುತ್ತಿದ್ದರು.

ರಾಶಿ ಪೂಜೆಯ ಆಕರ್ಷಣೆ

ರಾಶಿಪೂಜೆ ಬಗ್ಗೆ ಜನರಿಗೆ ಅರಿವು ಮೂಡಿಸುವ ಉದ್ದೇಶದಿಂದ ಕೃಷಿ ಇಲಾಖೆ ಏಳು ಸಿರಿಧಾನ್ಯ ಹಾಗೂ 9 ದ್ವಿದಳ ಧಾನ್ಯಗಳ ಮೂಲಕ ರಾಶಿಯನ್ನು ಅಲಂಕರಿಸಿದೆ. ರಾಶಿ ಮೇಲೆ ಕಳಸವನ್ನು ಪ್ರತಿಷ್ಠಾಪಿಸಲಾಗಿದೆ. ಇದು ನೋಡುಗರನ್ನು ಆಕರ್ಷಿಸುತ್ತಿದ್ದು, ಇತ್ತೀಚಿನ ದಿನಗಳಲ್ಲಿ ರಾಶಿಪೂಜೆ ಎಂಬುದು ನಗರದ ಜನತೆಗೆ ತಿಳಿದಿಲ್ಲ, ಹಾಗಾಗಿ, ಅವರಿಗೆ ಮಾಹಿತಿ ನೀಡಲು ಇದನ್ನು ಅಲಂಕರಿಸಲಾಗಿದೆ ಎಂದು ವಿವಿಯ ಪ್ರಾಧ್ಯಾಪಕರಾದ ಡಾ. ಶಿವರಾಮು ತಿಳಿಸಿದರು.

ಔಷಧ ಸಿಂಪಡಣೆಗೆ ಡ್ರೋನ್!

ನಾನಾ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಡ್ರೋನ್ ತಂತ್ರಜ್ಞಾನ ಕೃಷಿ ಕ್ಷೇತ್ರಕ್ಕೂ ಕಾಲಿಟ್ಟಿದೆ. ಇಲ್ಲಿ ಅದನ್ನು ಔಷಧ ಸಿಂಪಡಣೆಗೆ ಬಳಸಲಾಗುತ್ತದೆ. ರಾಸಾಯನಿಕ ಔಷಧ ತುಂಬಿದ ಟ್ಯಾಂಕ್ ಹೊತ್ತೊಯ್ಯುವ ಬೃಹತ್ ಡ್ರೋನ್ ಭತ್ತದ ಗದ್ದೆಗೆ ಔಷಧ ಸಿಂಪಡಿಸಲು ನಾನಾ ರಾಜ್ಯಗಳಲ್ಲಿ ಬಳಸಲಾಗುತ್ತಿದೆ. ಎಕರೆ ಭೂಮಿಗೆ ಕೇವಲ 5 ನಿಮಿಷದಲ್ಲಿ ಔಷಧ ಸಿಂಪಡಿಸುವ ಸಾಮರ್ಥ್ಯ ಈ ಡ್ರೋನ್‌ಗಿದೆ. ನಮ್ಮ ಸಂಸ್ಥೆ 16 ಲೀಟರ್ ಸಾಮರ್ಥ್ಯದ ಡ್ರೋನ್ ಹೊಂದಿದ್ದು, ಇದರ ಒಂದು ಬ್ಯಾಟರಿ ಅರ್ಧ ಗಂಟೆ ಬಾಳಿಕೆ ಬರುತ್ತದೆ. ದೇಶದ ಎಲ್ಲಾ ರಾಜ್ಯಕ್ಕೂ ನಮ್ಮ ಉತ್ಪನ್ನ ಮಾರಾಟವಾಗುತ್ತಿದೆ. ಒಂದು ಎಕರೆಗೆ ಔಷಧ ಸಿಂಪಡಿಸಲು 250 ರಿಂದ 300 ರೂ. ವೆಚ್ಚವಾಗುತ್ತದೆ. ಯಂತ್ರಕ್ಕೆ 10 ಲಕ್ಷ ರೂ.ವರೆಗೂ ಬೆಲೆ ಇದೆ ಎಂದು ಜನರಲ್ ಏರೋನಾಟಿಕ್ಸ್ ಕಂಪನಿಯ ರಚನಾ ಮಾಹಿತಿ ನೀಡಿದರು.



ಕೋಳಿ ಸ್ಟ್ಯಾಂಡ್‌ಗೆ ಭರ್ಜರಿ ಡಿಮ್ಯಾಂಡ್

ಅತ್ಯಂತ ಕಡಿಮೆ ಖರ್ಚಿನಲ್ಲಿ ಸಣ್ಣ ಪ್ರಮಾಣದಲ್ಲಿ ಕೋಳಿ ಸಾಕಾಣಿಕೆ ಉದ್ಯಮ ಆರಂಭಿಸಲು ಅನುಕೂಲವಾಗುವಂತಹ ಹೊಸ ವಿಧಾನವನ್ನು ಜಿಕೆವಿಕೆ ಆವರಣದ ಕೃಷಿ ಮೇಳದಲ್ಲಿ ಪರಿಚಯಿಸಲಾಗಿದೆ. ಅಝ್ರಾ ಪೌಲ್ಟ್ರಿ ಎಕ್ವಿಪ್ ಮೆಂಟ್ ಸಂಸ್ಥೆ 50 ಕೋಳಿಗಳನ್ನು ಸಾಕಬಹುದಾದ ಪುಟಾಣಿ ಸ್ಟ್ಯಾಂಡ್ ಸಿದ್ಧಪಡಿಸಿದ್ದು, ಗೃಹಿಣಿಯರಿಗೆ ಹೆಚ್ಚಿನ ಸಣ್ಣ ಉದ್ಯಮ ಆರಂಭಿಸಲು ಅನುಕೂಲವಾಗಲಿದೆ. ಮನೆಯ ಕೊಟ್ಟಿಗೆ, ಹಿತ್ತಲು ಅಥವಾ ಮನೆಯ ಪಕ್ಕದ ನೆರಳಿರುವ ಜಾಗದಲ್ಲಿ ಕೋಳಿ ಸಾಕಣೆ ಮಾಡಬಹುದು. 50 ಕೋಳಿಗಳು ಕುಳಿತುಕೊಳ್ಳಲು ಆಗುವಷ್ಟು ಪುಟಾಣಿ ಸ್ಟ್ಯಾಂಡ್ ಇದಾಗಿದೆ.



ಗಂಟೆಗೆ 1000 ಕಾಯಿ ಸುಲಿಯುತ್ತದೆ ಈ ಯಂತ್ರ

ಗಂಟೆಗೆ 800ರಿಂದ 1000 ತೆಂಗಿನಕಾಯಿ ಸಿಪ್ಪೆಸುಲಿಯಲಿಯಬಹುದಾದ ಯಂತ್ರವನ್ನು ಕೊಯಮತ್ತೂರಿನ ಎಆರ್‌ಎಸ್ ಎಂಜಿನಿಯರಿಂಗ್ ಸಂಸ್ಥೆ ಸಂಶೋಧಿಸಿದೆ. ವಿದ್ಯುತ್ ಮೂಲಕ ಕಾರ್ಯನಿರ್ವಹಿಸುವ ಈ ಯಂತ್ರ 3 ಸೆಕೆಂಡಿಗೆ ಒಂದು ತೆಂಗಿನಕಾಯಿಯ ಸಿಪ್ಪೆಸುಲಿಯುವ ಸಾಮರ್ಥ್ಯ ಹೊಂದಿದೆ. ಇದರ ವೆಚ್ಚ 1.88 ಲಕ್ಷ ರೂ.ಗಳಾಗಿದ್ದು, ಸಾಮಾನ್ಯ ವರ್ಗದವರಿಗೆ ಶೇ.50 ಮತ್ತು ಪರಿಶಿಷ್ಟ ಜಾತಿ, ಪಂಗಡದವರಿಗೆ ಶೇ.70ರಷ್ಟು ಸಬ್ಸಿಡಿ ಸಿಗಲಿದೆ ಎಂದು ಸಂಸ್ಥೆ ಸಂಚಾಲಕಿ ರಕ್ಷಿತಾ ಮಾಹಿತಿ ನೀಡಿದರು.

ದಂಟಿನ ಬೀಜದಲ್ಲಿ ಲಡ್ಡು, ಚಿಕ್ಕಿ



ದಂಟಿನ ಸೊಪ್ಪಿನ ಪಲ್ಯ, ಸಾಂಬಾರು ತಿಂದಿದ್ದೇವೆ. ಆದರೀಗ ದಂಟಿನ ಬೀಜದಿಂದ ಚಿಕ್ಕಿ, ಲಡ್ಡು, ಚಪಾತಿ, ಕೇಕ್, ಬಿಸ್ಕತ್ ಸೇರಿದಂತೆ ನಾನಾ ತಿನಿಸುಗಳನ್ನು ತಯಾರಿಸಿ ಮೆಲ್ಲಬಹುದು.

ದಂಟಿನ ಬೀಜ ಹುರಿದು ಅದರಲ್ಲಿ ಉಂಡೆ, ಚಿಕ್ಕಿ, ಲಡ್ಡು ತಯಾರಿಸಬಹುದು. ಹಿಟ್ಟು ಮಾಡಿ, ಚಪಾತಿ, ಬಿಸ್ಕತ್, ಕೇಕ್ ಮಾಡಬಹುದು. ಬೀಜದ ಮಾಲ್ಟ್ ಕೂಡ ಮಾಡಲು ಸಾಧ್ಯವಿದೆ. ಕೃಷಿ ಮೇಳದಲ್ಲಿ ಅಮರಾಂತೇಸಿ ಕುಟುಂಬ ಮತ್ತು ಅಮರಾಂತ್ ಜೀನಸ್‌ಗೆ ಸೇರಿದ ಬೀಜದ ದಂಟಿನ ಹೊಸ ಬೆಳೆ ಸಂಶೋಧಿಸಿ ಬೆಳೆಸಲಾಗಿದೆ.

ದಂಟಿನ ಬೀಜದಲ್ಲಿ ಶೇ.16ರಷ್ಟು ಪ್ರೋಟೀನ್ ಇರುತ್ತದೆ. ಅಷ್ಟು ಪ್ರಮಾಣದ ಪ್ರೊಟೀನ್ ನಾವು ಆಹಾರದಲ್ಲಿ ಉಪಯೋಗಿಸುವ ಯಾವುದೇ ಧಾನ್ಯಗಳಲ್ಲಿ ಇರುವುದಿಲ್ಲ. ದಂಟಿನ ಬೀಜದ ಪ್ರೊಟೀನ್‌ನಲ್ಲಿ ಲೈಸಿನ್ ಎಂಬ ಅವಶ್ಯಕ ಅಮೈನೋ ಆಮ್ಲವು ಹೆಚ್ಚಿರುತ್ತದೆ. ಜತೆಗೆ ಕ್ಯಾಲ್ಸಿಯಂ, ರಂಜಕ ಮತ್ತು ಕಬ್ಬಿಣದ ಅಂಶಗಳು ಹೆಚ್ಚಿನ ಪ್ರಮಾಣದಲ್ಲಿರುತ್ತವೆ. ದಂಟಿನ ಬೀಜದಲ್ಲಿ ಸುಮಾರು ಶೇ.6-10ರಷ್ಟು ಎಣ್ಣೆ ಅಂಶ ಇದ್ದು, ಆರೋಗ್ಯಕ್ಕೆ ಅನುಕೂಲಕರವಾಗಿರುವ ಲಿನೋಲೆನಿಕ್ ಕೊಬ್ಬಿನಂಶವೂ ಸೇರಿಕೊಂಡಿರುತ್ತದೆ.



ಕೃಷಿ ಮೇಳದಲ್ಲಿ ದಕ್ಷಿಣ ಅಮೆರಿಕ ಮೂಲದ ಪೌಷ್ಟಿಕಾಂಶ ಭರಿತ ಕಿನೋವಾ ಅಕ್ಕಿ ಬೆಳೆದಿರುವ ದೃಶ್ಯ.



ಬಾಳೆಗೊನೆಯನ್ನು ರೈತರು ವೀಕ್ಷಿಸಿದರು – ಪ್ರಜಾವಾಣಿ ಚಿತ್ರ

70 ಕೆ.ಜಿ ತೂಕದ ಬಾಳೆಗೊನೆ ಬೆಳೆದ ರೈತ

ಬೆಂಗಳೂರು: ಯಲಹಂಕ ಹೋಬಳಿ ಜಿ.ಬಿ. ಕಾವಲ್‌ನ ರೈತ ಅಶೋಕ, ಒಂದು ಬಾಳೆ ಗಿಡದಲ್ಲಿ 70 ಕೆ.ಜಿ ತೂಕದ ಬಾಳೆಗೊನೆ ಬೆಳೆದಿದ್ದಾರೆ. ರೈತನ ಸಾಧನೆ ಗುರುತಿಸಿರುವ ತೋಟಗಾರಿಕೆ ಇಲಾಖೆ, ಗಿಡದ ಸಮೇತ ಬಾಳೆಗೊನೆಯನ್ನು ಮೇಳದಲ್ಲಿ ಪ್ರದರ್ಶನಕ್ಕೆ ಇರಿಸಿದೆ.

ಮೇಳದಲ್ಲಿರುವ ತೋಟಗಾರಿಕೆ ಇಲಾಖೆ ಮಳಿಗೆಯಲ್ಲಿ ಬಾಳೆಗೊನೆ ಎಲ್ಲರ ಗಮನ ಸೆಳೆಯುತ್ತಿದೆ.

'ಅಶೋಕ ಅವರು ಒಂದು ಎಕರೆ ಜಮೀನಿನಲ್ಲಿ 'ಜಿ- 9' ತಳಿಯ ಬಾಳೆ ಬೆಳೆದಿದ್ದಾರೆ. ಮಣ್ಣು ಹದದಿಂದ ಹಿಡಿದು, ಗಿಡಗಳು ದೊಡ್ಡದಾಗುವವರೆಗೂ ಹೆಚ್ಚಿನ ಕಾಳಜಿ ಮಾಡಿದ್ದಾರೆ. ಹಂತ ಹಂತವಾಗಿ ಗಿಡಗಳಿಗೆ ಪೋಷಕಾಂಶ ಹಾಗೂ ಔಷಧೋಪಚಾರ ನೀಡಿದ್ದಾರೆ. ಇದರ ಫಲವಾಗಿ, ಇಂದು ಬಾಳೆ ಉತ್ತಮವಾಗಿ ಬೆಳೆದಿದೆ' ಎಂದು ಇಲಾಖೆಯ ಅಧಿಕಾರಿಯೊಬ್ಬರು ಹೇಳಿದರು.

'ಬಹುತೇಕ ಕಡೆ 'ಜಿ-9' ತಳಿಯ ಬಾಳೆ, ಒಂದು ಗಿಡಕ್ಕೆ 10 ಕೆ.ಜಿ. ಯಿಂದ 40 ಕೆ.ಜಿ ಬರುತ್ತದೆ. ಇದೀಗ ಗರಿಷ್ಠ 70 ಕೆ.ಜಿ ತೂಕದ ಬಾಳೆ ಬೆಳೆಯುವ ಮೂಲಕ ಅಶೋಕ ಯಶಸ್ವಿ ರೈತರಾಗಿದ್ದಾರೆ' ಎಂದೂ ತಿಳಿಸಿದರು.

ಚಪ್ಪರದ ಬೆಳೆಗಳ ಔಷಧ ಸಿಂಪಡಣೆಗೆ ವಿಶೇಷ ಬೂಮ್

ದ್ರಾಕ್ಷಿ ಬೆಳೆ, ಚಪ್ಪರದವರೆ, ಹಾಗಲಕಾಯಿ, ದಾಳಿಂಬೆ ಇತ್ಯಾದಿ ಬೆಳೆಗಳಿಗೆ ದೊಡ್ಡ ಮಟ್ಟದಲ್ಲಿ ಔಷಧ ಸಿಂಪಡಣೆ ಮಾಡಲು 'ಟ್ರ್ಯಾಕ್ಟರ್ ಬೂಮ್ ಸ್ಪ್ರೇಯರ್' ಬಂದಿದೆ. ಇದರ ಟ್ಯಾಂಕ್‌ನಲ್ಲಿ ಒಮ್ಮೆಲೆಗೆ 600 ಲೀಟರ್ ನೀರು ಮಿಶ್ರಿತ ಔಷಧ ತುಂಬಿಸಿಕೊಂಡು ಟ್ರ್ಯಾಕ್ಟರ್ ಚಲಾಯಿಸಿದರೆ ಇದರ ದುಂಡಾಕಾರದ ಬೃಹತ್ ಸ್ಪ್ರೇಯರ್ ಅನ್ನು 10 ಅಡಿ ಎತ್ತರದವರೆಗೆ ಸ್ಟ್ರಿಂಗ್ ಮಾದರಿಯಲ್ಲಿ ಏರಿಸಿ, ಔಷಧ ಸಿಂಪಡಿಸಬಹುದು. ''3.50 ಲಕ್ಷ ರೂ. ದರವಿದ್ದು, ಇದಕ್ಕೂ ಸಬ್ಸಿಡಿ ಸಿಗಲಿದೆ. ಒಂದು ಗಂಟೆಯಲ್ಲಿ ಒಂದು ಎಕರೆಗೂ ಹೆಚ್ಚು ಔಷಧ ಸಿಂಪಡಿಸಬಹುದು ಎನ್ನುತ್ತಾರೆ,'' ವಿಎಸ್‌ಟಿ ಟ್ರಿಲ್ಲರ್‌ನ ಸೌರಭ್ ಜೋಷಿ.





ನಗರದ ಜಿಕೆವಿಕೆ ಆವರಣದಲ್ಲಿ ಆಯೋಜಿಸಿರುವ ಕೃಷಿ ಮೇಳದಲ್ಲಿನ 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಮಳಿಗೆಗೆ ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್. ರಾಜೇಂದ್ರ ಪ್ರಸಾದ್ ಅವರು ಭೇಟಿ ನೀಡಿದರು– ಪ್ರಜಾವಾಣಿ ಚಿತ್ರ

13-11-2021
Vk Pg 02

ಕೃಷಿ ಕ್ಷೇತ್ರದ ಅಭದ್ರತೆ ನಿವಾರಿಸಿ



ಶಿವಮೊಗ್ಗ: ಕೃಷಿಗೆ ಅಭದ್ರತೆ ಇದ್ದರೆ ಅಂತಹ ದೇಶಗಳ ಜನರ ಬದುಕು ಕೂಡ ಸರಿ ಇರುವುದಿಲ್ಲ. ಇದರಿಂದಾಗಿ ಕೃಷಿಕರ ಬದುಕಿಗೆ ಭದ್ರತೆ ಕಲ್ಪಿಸುವ ಕೆಲಸ ಆಗಬೇಕಿದೆ ಎಂದು ಚಿತ್ರದುರ್ಗ ಮುರುಘಾ ಮಠದ ಡಾ. ಶ್ರೀ ಶಿವಮೂರ್ತಿ ಮುರುಘ ಶರಣರು ಹೇಳಿದರು.

ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಗೆ ವಿವಿ ವತಿಯಿಂದನವಿಲೆಯಲ್ಲಿಕೃಷಿಕಾಲೇಜಿನಲ್ಲಿಆಯೋಜಿಸಿರುವ ಎರಡು ದಿನಗಳ ಕೃಷಿ ಮೇಳವನ್ನು ಶುಕ್ರವಾರ ಉದ್ಘಾಟಿಸಿ ಆಶೀರ್ವಚನ ನೀಡಿದ ಅವರು, ಜನರ ಬದುಕಿಗೆ ನಿರಂತರ ಭದ್ರತೆ ನೀಡಲು ಕೃಷಿಯಿಂದ ಮಾತ್ರ ಸಾಧ್ಯ. ಭಾರತದಲ್ಲಿ ಸಾವಿರಾರು ವರ್ಷಗಳಿಂದ ಕೃಷಿ ಭದ್ರತೆ ನೀಡಿದೆ. ಈಗಲೂ ಕೃಷಿಗೆ ಬದ್ಧರಾಗಬೇಕಿದೆ ಎಂದರು.

ವೈಜ್ಞಾನಿಕ ಮತ್ತು ತಾಂತ್ರಿಕ ಆವಿಷ್ಕಾರದ ಮೂಲಕ ಏನನ್ನಾದರೂ ಸಂಶೋಧನೆ ಮಾಡಬಹುದು. ಆದರೆ ತಿನ್ನುವ ದವಸ, ಧಾನ್ಯ ಆವಿಷ್ಕರಿಸಲು ಸಾಧ್ಯವಿಲ್ಲ. ಭೂಮಿಯ ಮುಖಾಂತರವೇ ಆಹಾರ ಧಾನ್ಯಗಳನ್ನು ಬೆಳೆಯಬೇಕಿದೆ. ಭೂಮಿ ಆಧಾರಿತವಾಗಿಯೇ ಬದುಕಬೇಕು. ಭೂಮಿ ಬಿಟ್ಟರೆ ಬೇರೆ ಬದುಕೇ ಇಲ್ಲ ಎಂದು ಹೇಳಿದರು.

ಮೆಕ್ಕೆಜೋಳ ಬೆಲೆ ₹300 ಹೆಚ್ಚಳ

■ **ಯಳನಾಡು ಮಂಜು** ದಾವಣಗೆರೆ
manjunath.lokanath@timesgroup.com

- ಪ್ರತಿ ಕ್ವಿಂಟಾಲ್‌ಗೆ 1400-1700 ರೂ.ಗೆ ಏರಿಕೆ
- ಇಳುವರಿ ಕುಸಿತ
- ಖರೀದಿ ಕೇಂದ್ರಕ್ಕೆ ರೈತರ ಒತ್ತಾಯ

ಮೆಕ್ಕೆಜೋಳ ದರ ಎರಡು ವರ್ಷದ ನಂತರ ಒಂದಿಷ್ಟು ಮೇಲಕ್ಕೆ ಜಿಗಿದಿದೆ. ಬೆಲೆ ಕುಸಿದಾಗ ಎಲ್ಲ ಕೃಷಿ ಉತ್ಪನ್ನಗಳಿಗೂ ಬೆಂಬಲ ಬೆಲೆ ನೀಡಿದರೆ ರಾಜ್ಯದಲ್ಲಿ ಮಾತ್ರ ತಾಂತ್ರಿಕ ಕಾರಣಕ್ಕೆ ಈ ಬೆಲೆ ಸಿಗದೆ ಹೈರಾಣಾಗಿದ್ದ ಬೆಳೆಗಾರ ಈಗ ಕೊಂಚ ಹಿಗ್ಗಿದ್ದರೂ ಈ ದರ ಕೊನೇವರೆಗೂ ಇರಲಿ ಎಂದು ಪ್ರಾರ್ಥಿಸುತ್ತಿದ್ದಾರೆ.

ಮೆಕ್ಕೆಜೋಳ ಸುಗ್ಗಿ ಆರಂಭ ಆಗಿದ್ದು ಆವಕ ಮಾರುಕಟ್ಟೆಗೆ ದಾಂಗುಡಿ ಯಿಡುತ್ತಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಸದ್ಯ ಉತ್ತಮ ಧಾರಣೆ ಸಿಗುತ್ತಿದೆ.

ಕಳೆದ ವರ್ಷದ ಸುಗ್ಗಿ ವೇಳೆ ಮೆಕ್ಕೆಜೋಳ ಬೆಲೆ 1450 ರೂ.ದಾಟಲೇ ಇಲ್ಲ. ಆವಕ ಎಲ್ಲ ಮುಗಿದ ನಂತರ ಒಂದಿಷ್ಟು ಬೆಲೆ ಏರಿಕೆ ಆಗಿತ್ತು. ಈ ವರ್ಷ ಬೆಲೆ ಒಂದಿಷ್ಟು ಜಿಗಿದಿದ್ದು ಈಗ ಕನಿಷ್ಠ 1400 ರಿಂದ ಗರಿಷ್ಠ 1720 ರೂ. ದರ ಸಿಗುತ್ತಿದೆ. ಸುಗ್ಗಿ ಆರಂಭವಾಗುವ ಮುನ್ನ ಗರಿಷ್ಠ 1800 ರೂ.ವರೆಗೂ ಮಾರಾಟ ಆಗಿದೆ.

ಮೆಕ್ಕೆಜೋಳವನ್ನು ಕೋಳಿ, ಪಶು ಆಹಾರಕ್ಕೆ ಹೆಚ್ಚು ಬಳಸಲಾಗುತ್ತದೆ. ಕೊರೊನಾ ಶುರುವಾದ ನಂತರ ನಾನಾ ರೀತಿಯ ಸುದ್ದಿಗಳು ಹಬ್ಬಿ ಪೌಲ್ಟ್ರಿ ಕ್ಷೇತ್ರ ಸಂಪೂರ್ಣ ಕುಸಿದಿತ್ತು. ಇದರ ಎಫೆಕ್ಟ್ ಪೂರ್ಣ ಮೆಕ್ಕೆಜೋಳ ಬೆಲೆ ಮೇಲೆ ಬಿದ್ದು ಎರಡು ವರ್ಷ ಬೆಲೆ ಪಾತಾಳಕ್ಕೆ ಕುಸಿದಿತ್ತು.

ಕನಿಷ್ಠ ದರ 1000 ರೂ.ಗೆ ಇಳಿದರೆ, ಗರಿಷ್ಠ ದರ 1400 ರೂ. ದಾಟದೆ ರೈತರು ಕಂಗಾಲಾಗಿದ್ದರು. ಆದರೆ ಈ ವರ್ಷ ಬೆಲೆ ಕೊಂಚ ಏರಿಕೆಯಾಗಿದೆ. ಪ್ರತಿ ಕ್ವಿಂಟಾಲ್‌ಗೆ 250 ರಿಂದ 300 ರೂ. ದರ ಹೆಚ್ಚಾಗಿದೆ. ಆದರೆ, ಈ ಬೆಲೆ ಸುಗ್ಗಿ ಮುಗಿಯುವವರೆಗೂ ಇರಬೇಕು ಎಂಬುದು ರೈತರ ಒತ್ತಾಸೆಯಾಗಿದೆ. ನೆರೆ ರಾಜ್ಯಗಳ ಮೆಕ್ಕೆಜೋಳ ಬಂದರೆ ಬೆಲೆ ಕುಸಿಯುತ್ತದೆ ಎಂದು ಎಪಿಎಂಸಿ ಮೂಲಗಳು ಹೇಳುತ್ತವೆ.



ರಾಮಪ್ಪ ಅವರು ಮಣ್ಣಿನ ಮಡಿಕೆ ತಯಾರಿಸಿದರು. ಯುವತಿಯೊಬ್ಬರು ಕೈ ಜೋಡಿಸಿದ್ದರು

ಮಡಿಕೆ ತಯಾರಿಸಿ ಖುಷಿಪಟ್ಟ ಜನ

ಬೆಂಗಳೂರು: ಮಣ್ಣಿನ ಮಡಿಕೆಗಳಿಗೆ ಬೇಡಿಕೆ ತಗ್ಗಿರುವ ಇಂದಿನ ದಿನಗಳಲ್ಲಿ ಕುಂಬಾರ ರಾಮಪ್ಪ, ಕೃಷಿ ಮೇಳದ ಬಯಲಿನಲ್ಲೇ ಮಡಿಕೆ ತಯಾರಿಸಿ ಜನರ ಗಮನ ಸೆಳೆದರು

ಮೇಳದ ಪ್ರಮುಖ ರಸ್ತೆಯ ಬದಿಯಲ್ಲಿ ಪತ್ನಿ ಹಾಗೂ ಮಗನ ಜೊತೆ ಸೇರಿ ರಾಮಪ್ಪ ಮಡಿಕೆ ಮಾರುತ್ತಿದ್ದಾರೆ. ಜನರ ಎದುರೇ ಮಣ್ಣಿನ ಮಡಿಕೆ ತಯಾರಿಸಿ, ತಮ್ಮ ಮಡಿಕೆ ಖರೀದಿಸುವಂತೆ ಕೋರುತ್ತಿದ್ದಾರೆ.

ಚಕ್ರದ ಗಾಲಿ ತಿರುಗಿಸಿ, ಹದವಾದ ಮಣ್ಣಿನಿಂದ ಮಡಿಕೆ ತಯಾರಿಸುತ್ತಿದ್ದ ದೃಶ್ಯ ಜನರನ್ನು ಕುತೂಹಲದಿಂದ ನೋಡುವಂತೆ ಮಾಡಿತು. ಮಡಿಕೆ ತಯಾರಿಕೆಯಲ್ಲಿ ಪಾಲ್ಗೊಳ್ಳಲು ಜನರಿಗೂ ಅವಕಾಶ ನೀಡಲಾಗಿತ್ತು.

ಮಕ್ಕಳು ಹಾಗೂ ಯುವತಿಯರು ಹೆಚ್ಚಿನ ಸಂಖ್ಯೆಯಲ್ಲಿ ಚಕ್ರದ ಬಳಿ ಹೋಗಿ ಮಡಿಕೆ ತಯಾರಿಸಲು ಕೈ ಜೋಡಿಸಿದರು. ಚಕ್ರ ಸುತ್ತುತ್ತಿದ್ದಾಗಲೇ ಮಡಿಕೆಯನ್ನು ಸುಂದರ ಆಕೃತಿಗೆ ಪರಿವರ್ತಿಸಿದರು. ಕೆಲವರು ಮಡಿಕೆಯನ್ನು ಖರೀದಿಸಿಕೊಂಡು ಹೋದರು.

'ಇಂದಿನ ದಿನಗಳಲ್ಲಿ ಮಣ್ಣಿನ ಮಡಿಕೆ ಬಳಕೆ ತೀರಾ ಕಡಿಮೆ ಆಗಿದೆ. ಕುಲಕಸುಬು ನಂಬಿರುವ ನಮ್ಮಂಥ ಕುಂಬಾರರ ಜೀವನ ಕಷ್ಟವಾಗಿದೆ. ಇದನ್ನು ಜನರಿಗೆ ತಿಳಿಸಲು ಬಯಲಲ್ಲಿ ಮಡಿಕೆ ತಯಾರಿಸಿ, ಮಾರುತ್ತಿದ್ದೇನೆ' ಎಂದು ರಾಮಪ್ಪ 'ಪ್ರಜಾವಾಣಿ'ಗೆ ತಿಳಿಸಿದರು.